ಜನಪದ ವಿಚಾರ

೧೦-೦೦

ಚಿಂತನ * ದರ್ಶನ * ...ರ್ಶನ

ಜನಪದ ಸೇವಾ ಟ್ರಸ್ಟ್ ಪ್ರ...

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ನವೆಂಬರ್- ೨೦೦೯ ಸಂಚಿಕೆ-೪



ಚಂದ್ರನ ಮೇಲೆ ದಾಳಿ
ಮನುಕುಲದ ನಾಶಕ್ಕೆ ನಾಂದಿ

ಜನಪದ ವಿಚಾರದಲ್ಲಿ

ನವೆಂಬರ್-೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ – ೨೦೦೯
ಸಂಪುಟ – ೧೦
ಸಂಚಿಕೆ – ೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಸಂಗಾತಿ

ನನ್ನವಳ ಹೃದಯದಲಿ
ನನ್ನನ್ನೇ ನಾನು ಕಂಡೆ!
ನನ್ನ ಹೃದಯದಲ್ಲಿ ಅವಳ
ಹುಡುಕಿದೆ; ಅಲ್ಲಿಯೂ ಅವಳಿದ್ದಳು.

ಸಂಕಷ್ಟಗಳಿಗೆ ಕಡಿವಾಣ ಹಾಕಿ
ಸಂತಸದ ಹೂವಿನ ಸರ ಮಾಡಿ
ಸಮಚಿತ್ತಳಾಗಿ ಸಡಗರದಿ
'ಸರಿಗಮ' ಹಾಡು ಹಾಡಿದಳು.

ಸಾಹಿತ್ಯ, ಸಂಗೀತ –
ಎಂದೆಲ್ಲ ಅವಳಿಗೆ ಗೊತ್ತಿಲ್ಲ.
ಬದುಕಿನ ಬವಣೆಗಳ ಮೆಟ್ಟಿ
ಮನ ಮುಟ್ಟಿ ಬದುಕಿನ ರಥದ
ಸಾರಥ್ಯ ವಹಿಸಿದಳು.

ಧರಿತ್ರಿಗೆ ಸಮನಾಗಿ
ನನ್ನ ಹೃದಯದಿ ಮೊಗ್ಗಾಗಿ
ಹೂವಾಗಿ ಘಮಘಮಿಸಿ
ಬಾಳಿಗೆ ಪರಿಮಳ ಬೀರಿದವಳು.

ಮಣ್ಣಿನ ಸ್ವಾದ ಹೀರಿ
ಒಲವಿನ ಬದುಕು ಸವಿದು
ಸಕ್ಕರೆಯ ಸವಿ ಹಂಚಿ
ಬದುಕಿನ ಬಂಡಿ ನಡೆಸಿದವಳು.

– ಬಸವ ಶಿವಪೂಜೆ

ವಿಚಾರ ದೀಪ್ತಿ

ಭಾರತದಲ್ಲಿರುವ ಮೂಲ ಶಿಕ್ಷಣದ ಬಗ್ಗೆ ನನಗೆ ಅಭಿಮಾನವಿದೆ. ಭಾರತದಲ್ಲಿಯ ಶಾಲೆಗಳು ಮೂಲ ಶಿಕ್ಷಣದಲ್ಲಿ ಒಳ್ಳೆ ಅಡಿಪಾಯವನ್ನು ಹಾಕುತ್ತವೆ. ಭಾರತದ ಅನೇಕ ವಿದ್ಯಾರ್ಥಿಗಳು ಪಶ್ಚಿಮ ದೇಶಗಳಲ್ಲಿ ತುಂಬ ಒಳ್ಳೆಯ ಸಾಧನೆಯನ್ನು ಮಾಡುತ್ತಾರೆಂದರೆ ಭಾರತದಲ್ಲಿ ಮೂಲ ಶಿಕ್ಷಣದ ವಿಷಯವಾಗಿ ತುಂಬ ಒಳ್ಳೆಯ ಅಡಿಪಾಯವನ್ನು ಹೊಂದಿರುತ್ತಾರೆಂದೇ ಅರ್ಥ. ಚಿಕ್ಕ ಮಕ್ಕಳನ್ನು ಬಹಳಷ್ಟು ಮನೆಕೆಲಸ ಮತ್ತು ಪರೀಕ್ಷೆಗಳ ಭಾರದಿಂದ ಬಳಲಿಸುವುದು ಸರಿಯಲ್ಲ. ಅಲ್ಲದೆ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣಕ್ಕೋಸ್ಕರ ಇರುವ ಹುಚ್ಚು ನೂಕು ನುಗ್ಗಲು ಸರಿಯಲ್ಲ. ನಾನು ಗಂಭೀರ ಅಧ್ಯಯನಶೀಲತೆಯ ವ್ಯಕ್ತಿಯೇ ಆಗಿರಲಿಲ್ಲ. ಅಂಥ ವ್ಯಕ್ತಿ ನಾನಾಗಿದ್ದರಬಹುದೆಂಬ ಅರ್ಥಹೀನ ವಿಚಾರವನ್ನು ಜನ ಮಾಡುತ್ತಾರೆ. ಏಕೆಂದರೆ ಭಾರತೀಯ ಕುಟುಂಬಗಳಲ್ಲಿ ಮನೆಗೆಲಸ ಮತ್ತು ಪರೀಕ್ಷೆಗಳಿಂದ ಮಕ್ಕಳ ಮೇಲೆ ಭಾರ ಹಾಕುವ ಒಂದು ಸ್ವಭಾವವಿದೆ. ಇನ್ನೊಂದು ಸ್ವಭಾವ ಅವರನ್ನು ಸುರಕ್ಷಿತ ಜೀವನ ಮಾರ್ಗಗಳೆಂದು ತಿಳಿಯಲಾಗಿರುವ ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ವ್ಯವಸ್ಥಾ ನಿರ್ವಹಣೆ ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಅವರನ್ನು ತಳ್ಳುವ ಸ್ವಭಾವ. ವಿಜ್ಞಾನದಲ್ಲಿ ಪದವೀಧರನಾಗಲು ವೈದ್ಯಕೀಯ ಕಾಲೇಜ್‌ನಲ್ಲಿ ಮತ್ತು ತಾಂತ್ರಿಕ ಕಾಲೇಜ್‌ನಲ್ಲಿ ದೊರೆತ ಅವಕಾಶವನ್ನು ನಾನು ನಿರಾಕರಿಸಿದಾಗ ಜನರಿಗೆ ಆಘಾತವಾಯಿತು. ಕೇವಲ ಅಧ್ಯಯನ, ಇನ್ನೂ ಅಧ್ಯಯನ, ಮತ್ತು ಹೆಚ್ಚು ಅಧ್ಯಯನವಲ್ಲದೆ ಮಕ್ಕಳಿಗೆ ಬಿಡುವು ಕೂಡ ಇರಬೇಕು. ಶಾಲೆಯ ಆವರಣದಲ್ಲಿದ್ದ ಮಾವಿನಮರ ಮತ್ತು ಸಪೋಟ ಮರದಲ್ಲಿ ಆಡಿದ ನನ್ನ ಆ ದಿನಗಳನ್ನು ನಾನು ಎಂದಿಗೂ ಮರೆಯಲಾರೆ. ಶಾಲೆಯ ಆವರಣದಲ್ಲಿಯ ಮರಗಳಷ್ಟೇ ಅಲ್ಲ ದೇಶದಲ್ಲಿಯ ಎಲ್ಲ ನಗರಗಳಲ್ಲಿಯ ಮರಗಳನ್ನು ಕಡಿಯಲಾಗುತ್ತಿರುವುದು ವಿಷಾದನೀಯ. ನಾನು ಭಾರತಕ್ಕೆ ಭೇಟಿ ಕೊಟ್ಟಾಗ ನಗರಗಳು ಯೋಜನಾರಹಿತವಾಗಿ ಮತ್ತು ಗಿಡಮರಗಳಿಗೆ ಹಾಗೂ ಬಯಲು ಪ್ರದೇಶಕ್ಕೆ ಅವಕಾಶವಿಲ್ಲದಂತೆ ಬೆಳೆದಿರುವುದನ್ನು ನೋಡಿ ನನಗೆ ದುಃಖವಾಗುತ್ತದೆ. ಇಂದಿನ ಮಕ್ಕಳು ಎಲ್ಲಿ ಆಡುತ್ತಾರೆ? ಅವರು ಮನೆಗೆ ಬರುತ್ತಾರೆ ಮತ್ತು ಬಹುಶಃ ದೂರದರ್ಶನ ನೋಡುತ್ತಾರೆ. ಇಲ್ಲವೆ ಬಹಳಷ್ಟು ಮನೆಗೆಲಸ ಮಾಡುವಂತೆ ಅವರ ಮೇಲೆ ಒತ್ತಾಯ ಹೇರಲಾಗುತ್ತದೆ. ನನಗೆ ತೋರಿದಂತೆ ಮಾಡಲು ನನ್ನ ತಂದೆ ತಾಯಿಗಳು ಅವಕಾಶ ಕೊಡುತ್ತಿದ್ದದ್ದು ನನಗೆ ಸಂತೋಷವನ್ನುಂಟುಮಾಡುತ್ತಿತ್ತು. ನಾನು ತುಂಬ ಗಂಭೀರ ಅಧ್ಯಯನದ ವಿದ್ಯಾರ್ಥಿಯಾಗಿದ್ದೆನೆಂಬ ಕಟ್ಟು ಕಥೆಯನ್ನು ಉಂಟು ಮಾಡಿದ್ದಾರೆ. ಆದರೆ ನಿಜಸಂಗತಿಯೇನೆಂದರೆ ನಾನು ಬಹು ಮಟ್ಟಿಗೆ ಚಿಂತಾರಹಿತ ಬಾಲಕನಾಗಿದ್ದೆ. ಬಹಳಷ್ಟು ಸಲ ನನ್ನ ಮನೆಗೆಲಸವನ್ನು ಮಾಡದೇ ನನ್ನ ಸ್ನೇಹಿತರೊಂದಿಗೆ ಆಡುವುದನ್ನು, ಹಾಡುವುದನ್ನು ಮತ್ತು ಮರಹತ್ತುವುದನ್ನು ಇಷ್ಟ ಪಡುತ್ತಿದ್ದೆ. ಶಾಲೆ ಬಿಟ್ಟ ನಂತರ ರಾತ್ರಿ ಊಟದ ಸಮಯದವರೆಗೂ ಆಟವಾಡುತ್ತಿದ್ದದ್ದು ನನಗೆ ನೆನಪಿದೆ. ನಾನು ಓದಲು ಕುಳಿತರೆ ಓದುತ್ತಿದ್ದದ್ದು ನನ್ನ ಪಠ್ಯಪುಸ್ತಕಗಳ ಹೊರತಾಗಿರುವ ಪುಸ್ತಕಗಳನ್ನು! ನನಗೆ ವಿರಾಮವೆಂದರೆ ಕೇವಲ ಆಟವಾಗಿರಲಿಲ್ಲ. ಬಾಲಕಿಯರ ಶಾಲೆಯಲ್ಲಿ ಓದಿದ್ದರ ಅನೇಕ ನೆನಪುಗಳಿವೆ. ನಾನು ಕಸೂತಿ ಹಾಕಿದ್ದರ ಬಗ್ಗೆ ನನಗೆ ಅಭಿಮಾನವಿದೆ. ನಾನು ಸ್ವತಃ ಕಸೂತಿ ಹಾಕಿದ ಟೇಬಲ್‌ಕ್ಲಾತ್ ನನ್ನ ಬಳಿಯಿದೆ. ನಾನು ಅದನ್ನು ಜನರಿಗೆ ತೋರಿಸುತ್ತೇನೆ ಮತ್ತು ನಾನು ಬಾಲಕಿಯರ ಶಾಲೆಯಲ್ಲಿ ಓದಿದ್ದನ್ನು ಹೇಳುತ್ತೇನೆ. ನಾನು ತಮಾಷೆ ಮಾಡುತ್ತಿದ್ದೇನೆಂದು ಅವರು ಭಾವಿಸುತ್ತಾರೆ. ನಂತರ ಅವರಿಗೆ ಖುಷಿ ಅನಿಸುತ್ತದೆ.

ನಾನು ದೊಡ್ಡವನಾಗುತ್ತಿದ್ದಾಗ ಸಂಗೀತ ಕಲಿಯುವ ಅವಕಾಶವೇ ನನಗೆ ದೊರೆಯದಿದ್ದದ್ದು ನನ್ನ ದುರಾದೃಷ್ಟ. ನಾನು ಇಂದಿಗೂ ಆ ಬಗ್ಗೆ ವಿಷಾದಿಸುತ್ತೇನೆ.

– ವೆಂಕಟರಾಮನ್ ರಾಮಕೃಷ್ಣನ್

(ರಸಾಯನ ಶಾಸ್ತ್ರದಲ್ಲಿ ೨೦೦೯ರ ನೋಬೆಲ್ ಪ್ರಶಸ್ತಿ ಪುರಸ್ಕೃತ)

ಚಂದ್ರನ ಮೇಲೆ ದಾಳಿ
ಮನುಕುಲ ನಾಶಕ್ಕೆ ನಾಂದಿ

- ಸುರೇಂದ್ರ ಕೌಲಗಿ

ಅಮೇರಿಕದ ನಾಸಾ ಸಂಸ್ಥೆ ಇದೇ ಅಕ್ಟೋಬರ್ ಒಂಭತ್ತರಂದು ಚಂದ್ರನ ಮೇಲೆ ಬಾಂಬ್ ಸದೃಶವಾದ ರಾಕೆಟ್ ಬೀಳಿಸಿ ಮನುಕುಲದ ಉದ್ಧಾರದ ಹೆಸರಿನಲ್ಲಿ ಅದರ ವಿನಾಶದ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಅರವತ್ತನಾಲ್ಕು ವರ್ಷಗಳ ಹಿಂದೆ ಇದೇ ಅಮೇರಿಕಾ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಪ್ರಪಂಚವನ್ನು ಯುದ್ಧ ಮುಕ್ತವನ್ನಾಗಿ ಮಾಡುವ ಉದಾತ್ತ ಉದ್ದೇಶ್ಯದಿಂದ ಹಾಗೂ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೊಳ್ಳಬೇಕೆಂಬ ಘನ ಉದ್ದೇಶ್ಯದಿಂದ ತಾನು ಜಪಾನ ದೇಶದ ಎರಡು ಮಹಾ ನಗರಗಳಾದ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಅಣುಬಾಂಬ್ ಹಾಕುವುದಾಗಿ ಘೋಷಿಸಿತ್ತು. ಆದರೆ ಆದದ್ದೇನು? ಆ ನಗರಗಳು ಪೂರ್ಣ ನೆಲಸಮವಾದವು ಮತ್ತು ೨,೨೦,೦೦೦ ಜನ ಅಸು ನೀಗಿದರು. ಅಲ್ಲದೆ, ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ನಿಜವಾದ ಪ್ರಜಾಪ್ರಭುತ್ವ ಇನ್ನೂ ಸ್ಥಾಪನೆಗೊಳ್ಳಬೇಕಾಗಿದೆ. ಇಷ್ಟೇ ಅಲ್ಲ, ಎರಡನೇ ಮಹಾಯುದ್ಧದ ಒಡಲೊಳಗಿಂದ ಯುದ್ಧದ ಅನೇಕ ಬೀಜಗಳು ಹೊರಚೆಲ್ಲಿ ಆರು ದಶಕಗಳಿಂದಲೂ ಜಗತ್ತಿನಾದ್ಯಂತ ಘೋಷಿತ-ಅಘೋಷಿತ, ಬಹಿರಂಗ-ಅಂತರಂಗ ಯುದ್ಧಗಳು ನಡೆಯುತ್ತಲೇ ಇವೆ. ಈ ಯುದ್ಧಗಳಲ್ಲಿ ಸತ್ತವರ ಸಂಖ್ಯೆ ಎರಡೂ ವಿಶ್ವ ಸಮರಗಳಲ್ಲಿ ಸತ್ತವರ ಸಂಖ್ಯೆಗಿಂತಲೂ ಹೆಚ್ಚಾಗಿಯೇ ಇದೆ. A war is waged against a war, to end a war, result is war for yet another war ಎಂಬಂತೆ ಇಂದು ಜಗತ್ತು ಯುದ್ಧಗಳ ವಿಷವರ್ತುಲದಲ್ಲಿ ಸಿಕ್ಕಿಹಾಕಿಕೊಂಡಿದೆ. ಈ ವಿಷ ವರ್ತುಲದಿಂದ ಜಗತ್ತು ಹೊರಬರಲು ಸಾಧ್ಯವೇ ಇಲ್ಲವೆಂಬಂಥ ಪರಿಸ್ಥಿತಿ ಉಂಟಾಗಿದೆ. ಹಾಗಾದರೆ ಅಮೇರಿಕಾ ಅಣುಬಾಂಬನ್ನು ಜಪಾನ್ ಮೇಲೆ ಹಾಕುವಾಗ ಘೋಷಿಸಿದ್ದ ಆ ಶ್ರೇಷ್ಠ ಉದ್ದೇಶ್ಯಗಳು ಏನಾದವು? ಅವು ಮಣ್ಣುಪಾಲದವಷ್ಟೆ.

ಈಗ ಚಂದ್ರನ ಮೇಲೆ ದಾಳಿ ಮಾಡುವುದರ ಮೂಲಕ ಅಮೇರಿಕಾ ಅಂಥದೇ ದುರಂತಮಯವಾದ ಸಾಹಸಕ್ಕೆ ಕೈ ಹಾಕಿದೆ; ಹಾಗೂ ಪ್ರಪಂಚದ ಇತರ ದೇಶಗಳಿಗೂ ಇಂಥ ಸಾಹಸಕ್ಕೆ ಪ್ರೇರಣೆ ಕೊಡುತ್ತಿದೆ. ಈಗ ಚಂದ್ರನ ಮೇಲೆ ದಾಳಿ ಮಾಡಲು ದೇಶಗಳ ಮಧ್ಯ ಪೈಪೋಟಿಯೇ ನಡೆಯುತ್ತಿದೆ. ಈ ಪೈಪೋಟಿ ನಿಶ್ಚಿತವಾಗಿಯೂ ಕೇಡಿಗಾಗಿಯೇ ಇದೆಯೆಂದು ಅಮೇರಿಕಾ ಅಣು ಅಸ್ತ್ರ ಸ್ಫೋಟಿಸಿದಾಗಿನಿಂದ ನಡೆದು ಬಂದಿರುವ ಅಣ್ವಸ್ತ್ರಗಳ ತಯಾರಿಕೆಯಲ್ಲಿ ನಡೆದಿರುವ ಪೈಪೋಟಿ ನಮ್ಮ ಮುಂದೆ ಸಾಕ್ಷಿ ರೂಪವಾಗಿಯೇ ಇದೆ. ಅಣ್ವಸ್ತ್ರದಿಂದ ಭಯಂಕರ ದುರಂತವಾಗುತ್ತದೆಂದು ಗೊತ್ತಾದ ಮೇಲೂ ಎಲ್ಲ ದೇಶಗಳು ಅಣ್ವಸ್ತ್ರಗಳನ್ನೇಕೆ ತಯಾರಿಸುತ್ತಿವೆ? ಒಂದು ಅಂದಾಜಿನ ಪ್ರಕಾರ ಸ್ವತಃ ಅಮೇರಿಕೆಯ ಬಳಿಯೆ ಇಂದು ೫,೨೦೦ ಬಾಂಬ್‌ಗಳಿವೆ; ಫ್ರಾನ್ಸ್ ಬಳಿ

೫೯೦ ಬಾಂಬ್‌ಗಳಿವೆ, ಬ್ರಿಟನ್ ಬಳಿ ೨೦೦ ಬಾಂಬ್‌ಗಳಿವೆ, ಚೀನಾದ ಬಳಿ ೪೦೦ಕ್ಕೂ ಹೆಚ್ಚು ಬಾಂಬ್‌ಗಳಿವೆಯಲ್ಲದೆ ನೂರಾರು ಬಾಂಬ್ ತಯಾರಿಕೆಗೆ ಬೇಕಾದ ವಿದಳದ ಸಾಮಗ್ರಿಗಳ ಸಂಗ್ರಹವನ್ನು ಹೊಂದಿದೆ, ರಷ್ಯಾದ ಬಳಿ ೧೪,೦೦೦ ಬಾಂಬ್‌ಗಳಿವೆ, ಪಾಕಿಸ್ತಾನದ ಬಳಿ ೩೦ ರಿಂದ ೫೦ ಬಾಂಬ್‌ಗಳಿವೆ ಮತ್ತು ಸಾಕಷ್ಟು ಯುರೇನಿಯಂ ಸಂಗ್ರಹವಿದೆ, ಇಸ್ರೇಲ್ ಬಳಿ ೫೦೦ ರಿಂದ ೬೦೦ ಬಾಂಬ್ ಇವೆ. ಇರಾನ್ ಕೂಡ ಬಾಂಬ್ ತಯಾರಿಸಿದೆ. ಭಾರತದ ಬಳಿ ೫೦ ರಿಂದ ೬೦ ಬಾಂಬ್‌ಗಳಿವೆ, ಅಲ್ಲದೆ ವರ್ಷಕ್ಕೆ ೧೦೦ ಪರಮಾಣು ಬಾಂಬುಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಬಾಂಬುಗಳು ಯಾವ ಸ್ಥಳದಲ್ಲಿ ಬೀಳುತ್ತವೆಯೋ ಆ ಸ್ಥಳದಲ್ಲಿ ಉಂಟಾಗಬಹುದಾದ ಪ್ರಾಣಹಾನಿ, ಆಸ್ತಿಹಾನಿ, ವಾಯುಮಾಲಿನ್ಯ ಇತ್ಯಾದಿಗಳ ಪ್ರಮಾಣ ಲೆಕ್ಕ ಹಾಕಿದರೆ ಎದೆಯಲ್ಲಿ ನಡುಕವುಂಟಾಗುತ್ತದೆ. ಮನುಕುಲ, ಪ್ರಾಣಿಕುಲದ ಸರ್ವನಾಶವಾಗುತ್ತದೆಂಬ ಭೀತಿಯುಂಟಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ನಿರಂತರವಾಗಿ ಬೆಳೆಯುತ್ತಲೇ ಇದೆ. ಇವು ಬೆಳೆದಷ್ಟೂ ಶಸ್ತ್ರಾಸ್ತ್ರಗಳ ನಿರ್ಮಾಣದ ಪ್ರಮಾಣವೂ ಶೇಖರಣೆಯೂ ಬೆಳೆಯುತ್ತಲೇ ಹೋಗುತ್ತದೆ.

ಭೀಕರ ಶಸ್ತ್ರಾಸ್ತ್ರಗಳ ಪ್ರಯೋಗಕ್ಕೆ ನಮ್ಮೀ ಭೂಮಿ ಸಾಲದೆಂಬಂತೆ ಚಂದ್ರನನ್ನೂ ಮತ್ತು ಇನ್ನಿತರ ಆಕಾಶಕಾಯಗಳನ್ನು ಬಳಸಲಾಗುತ್ತಿದೆ.

ಅಣುಬಾಂಬ್‌ಗಳ ಸಂಖ್ಯೆ ಬೆಳೆದು ಮನುಕುಲದ ಅಸ್ತಿತ್ವಕ್ಕೆ ಅಪಾಯ ಉಂಟಾಗಿದೆಯೆಂಬುದು ಜಗತ್ತಿನ ಅಧಿಕಾರಾರೂಢ ರಾಜಕಾರಣಿ ನೇತಾರರಿಗೆ ಗೊತ್ತಾಗುತ್ತಿದ್ದಂತೆಯೇ ಅಣು ಅಸ್ತ್ರಗಳ ವಿಸ್ತರಣೆಗೆ ತಡೆ ಹಾಕುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಅದಕ್ಕಾಗಿ ಅನೇಕ ಬಗೆಯ ನಿಯಮಾವಳಿಗಳನ್ನು ತಯಾರಿಸಿ ಅಣ್ವಸ್ತ್ರಗಳ ವಿಸ್ತರಣೆಗೆ ಲಗಾಮು ಹಾಕಲಾಗುತ್ತಿದೆಯಾದರೂ ಅನೇಕ ದೇಶಗಳು ಕದ್ದು ಮತ್ತು ಕಣ್ಣುಮುಚ್ಚಾಲೆಯಾಡುತ್ತ ಅಣ್ವಸ್ತ್ರಗಳನ್ನು ತಯಾರಿಸುತ್ತಲೇ ಇವೆ. ಇದಕ್ಕೆ ಉದಾಹರಣೆಯಾಗಿ ಉತ್ತರ ಕೊರಿಯಾ, ಇರಾನ್, ಪಾಕಿಸ್ತಾನ, ಇಸ್ರೇಲ್ ಮುಂತಾದ ದೇಶಗಳನ್ನು ಉದಹರಿಸಬಹುದು. ಇದರಲ್ಲೂ ಗಮನಿಸಬೇಕಾದ ಅಂಶವೇನೆಂದರೆ ಮೊದಲು ವಿಧ್ವಂಸಕ ಕೃತ್ಯವನ್ನು ಯಾವುದೋ ಒಂದು ದೇಶ ಪ್ರಾರಂಭಿಸುತ್ತದೆ. ಅದನ್ನು ತಡೆಯುವುದಕ್ಕೆ ಹಾಗೂ ಸ್ವರಕ್ಷಣೆಗಾಗಿ ಪ್ರತಿಯೊಂದು ದೇಶವೂ ವಿಧ್ವಂಸಕ ಕಾರ್ಯದಲ್ಲಿ ತೊಡಗುತ್ತದೆಂಬುದು. ಮುಂದೆ ವಿಧ್ವಂಸಕ ಕಾರ್ಯಗಳು ಹೆಚ್ಚಾದ ಮೇಲೆ ಅವುಗಳ ನಿಯಂತ್ರಣಕ್ಕಾಗಿ ಪ್ರಯತ್ನಿಸುವ ಹುಚ್ಚು ಪ್ರಯತ್ನ ನಡೆಯುತ್ತದೆ. ಇಂಥದೇ ಒಂದು ಪರಿಸ್ಥಿತಿ ಚಂದ್ರನ ಮೇಲಿನ ದಾಳಿಗೂ ಭವಿಷ್ಯದಲ್ಲಿ ಅನ್ವಯಿಸಬಹುದು. ೧೯೫೭ರಲ್ಲಿ ರಷ್ಯಾ ಸ್ಪುಟ್ನಿಕ್ ಎಂಬ ಕೃತಕ ಉಪಗ್ರಹವನ್ನು ಆಕಾಶಕ್ಕೆ ಕಳುಹಿಸಿ ಚಂದ್ರನತ್ತ ಮನುಷ್ಯನ ಪ್ರಯಾಣಕ್ಕೆ ಹಾಗೂ ನಂತರ ಚಂದ್ರನ ಮೇಲೆ ದಾಳಿ ಮಾಡುವ ಉದ್ಯಮದವರೆಗಿನ ಯುಗಕ್ಕೆ ನಾಂದಿ ಹೇಳಿತು. ಅಮೇರಿಕಾ ರಷ್ಯಾದ ಬೆನ್ನುಹತ್ತಿತು. ನಂತರ ಯೂರೋಪಿನ ದೇಶಗಳು ಹಿಂಬಾಲಿಸಿದವು. ಜಪಾನ್ ತಾನೇಕೆ ಹಿಂದುಳಿಯಬೇಕೆಂದು ಇಷ್ಟರಲ್ಲಿಯೇ ಚಂದ್ರನಲ್ಲಿ ನೆಲೆಯನ್ನು ಸ್ಥಾಪಿಸಲಿದೆ. ಅದೇ ರೀತಿ ಚೀಣಾ ಮಾಡುತ್ತಿದೆ. ಭಾರತವೂ ಮಾಡುತ್ತಿದೆ. ಇದುವರೆಗೆ ೧೨ಜನ ಗಗನಯಾತ್ರಿಗಳು ಚಂದ್ರನ ಮೇಲೆ ಇಳಿದು ನೂರಾರು ಕಿಲೋಗ್ರಾಂ ಚಂದ್ರದ್ರವ್ಯವನ್ನು ಭೂಮಿಗೆ ತಂದಿದ್ದಾರೆ. ಭಾರತ ಚಂದ್ರನಲ್ಲಿ ಮನುಷ್ಯನನ್ನು ಇಳಿಸುವ ಪ್ರಯತ್ನ ಮಾಡುತ್ತಿದೆ. ಅದಕ್ಕಾಗಿ 'ಚಂದ್ರಯಾನ' ಎಂಬ

ಬೃಹತ್ ಯೋಜನೆಯನ್ನೇ ತಯಾರಿಸಿದೆ. ಈಗಾಗಲೆ 'ಚಂದ್ರಯಾನ-೧' ಮುಗಿಸಿ 'ಚಂದ್ರಯಾನ-೨' ಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಹೀಗೆ ಸಾಗುತ್ತದೆ ಚಂದ್ರನ ಮೇಲಿನ ದಾಳಿಯ ಸರಣಿ ಮತ್ತು ಪೈಪೋಟಿ.

ಚಂದ್ರನ ಮೇಲಿನ ದಾಳಿಗೆ ಕಾರಣವೇನು? ನಿಜವಾಗಿಯೂ ಅದರಲ್ಲಿ ಸ್ವಾರ್ಥದ ವಿಚಾರವಲ್ಲದೆ ಬೇರೇನೂ ಇರಲು ಸಾಧ್ಯವಿಲ್ಲ. ಅಲ್ಲದೆ, ಈಗಾಗಲೇ ಶಸ್ತ್ರಾಸ್ತ್ರಗಳ ಬಲದಿಂದ ಬಲಾಢ್ಯವಾಗಿರುವ ಮತ್ತು ಬಲಾಢ್ಯವಾಗುತ್ತಿರುವ ದೇಶಗಳು ಚಂದ್ರನಂಥ ಉಪಗ್ರಹವನ್ನು ತಮ್ಮ ಕೈವಶಮಾಡಿಕೊಂಡರೆ ಆ ಸ್ಥಳವನ್ನು ಸಮರ ಕ್ಷಮತೆಗಾಗಿ, ಸಮರದಲ್ಲಿ ತಮ್ಮ ಕೈ ಮೇಲಾಗುವುದಕ್ಕಾಗಿ ಉಪಯೋಗಿಸಿಕೊಳ್ಳಬಹುದೆಂಬ ಉದ್ದೇಶ್ಯವೂ ಚಂದ್ರಯಾನಗಳ ಹಿಂದೆ ಇರುವ ಗುಪ್ತ ಅಜೆಂಡಾ. ಹಾಗಿಲ್ಲವಾಗದೇ ಇದ್ದಲ್ಲಿ ಚಂದ್ರನಲ್ಲಿ ನೀರಿನ ಹುಡುಕಾಟದ ಹಾಗೂ ಅಲ್ಲಿ ಮಾನವ ನೆಲೆಗಳನ್ನು ಸ್ಥಾಪಿಸುವ ಹಾಗೂ ಅಲ್ಲಿಯ ಖನಿಜಗಳನ್ನು ತಂದು ಪರೀಕ್ಷಿಸುವ ಕಾರಣವಿರಲಿಲ್ಲ. ಚಂದ್ರನ ಭೂಗರ್ಭದಲ್ಲಿ ಹೀಲಿಯಂ ಎಂಬ ಖನಿಜ ಅಪಾರವಾದ ಪ್ರಮಾಣದಲ್ಲಿ ದೊರೆಯುತ್ತದೆ. ಈ ಖನಿಜವನ್ನು ಪರಮಾಣು ವಿದ್ಯುತ್ ಸ್ಥಾವರಗಳ ಅಣು ಸಂಯೋಜನೆಗಾಗಿ ಬಳಸಿ ವಿದ್ಯುತ್ ಶಕ್ತಿಯನ್ನು ತಯಾರಿಸಬಹುದಾಗಿದೆ. ವಿದ್ಯುತ್‌ಶಕ್ತಿ ಮುಖ್ಯವಾಗಿ ಬೇಕಾಗಿರುವುದು ಯಾಂತ್ರೀಕರಣಕ್ಕಾಗಿ. ಯಾಂತ್ರೀಕರಣದ ಚಾಲಕಶಕ್ತಿ ವಾಣಿಜ್ಯಾಧಾರಿತ ಹಿತಾಸಕ್ತಿ. ಈ ಹಿತಾಸಕ್ತಿಯ ಹಿಂದೆ ಇರುವುದು ಆರ್ಥಿಕ ಹಿತಾಸಕ್ತಿ. ಆರ್ಥಿಕ ಹಿತಾಸಕ್ತಿಯ ಹಿಂದೆ ಇರುವ ಚಾಲಕಶಕ್ತಿ ವಸಾಹಾತುಶಾಹಿ ಸ್ಥಾಪನೆ. ವಸಹಾತುಶಾಹಿಗೆ ಆಧಾರವಾಗಿ ನಿಂತಿರುವುದು ಬಂಡವಾಳಶಾಹಿ. ಬಂಡವಾಳಶಾಹಿಗೆ ಇಂಧನ ರಾಜಕೀಯೋದ್ಯೇಶದ ಸ್ವಾರ್ಥ. ರಾಜಕೀಯೋದ್ಯೇಶದ ಸ್ವಾರ್ಥದ ಪರಿಣಾಮ ಗ್ರಹ ಸಮರ. ಗ್ರಹ ಸಮರದ ಅಂತಿಮ ಪರಿಣಾಮ ಜೀವಕೋಟಿಯ ಸರ್ವನಾಶ. ಚಂದ್ರನ ಬಳಿಗೆ ಏಕೆ ಹೋಗಬೇಕೆಂಬುದಕ್ಕೆ ಜಗತ್ತಿನಾದ್ಯಂತ ಇರುವ ಖಗೋಲ ವಿಜ್ಞಾನಾಸಕ್ತರಿಗೆ, ಇಂಜಿನಿಯರ್‌ಗಳಿಗೆ, ವಾಣಿಜ್ಯೋದ್ಯಮಿಗಳಿಗೆ, ಆಕಾಶ ಪ್ರಿಯರಿಗೆ ಮತ್ತು ಸಾಮಾನ್ಯ ಜನರಿಗೆ ಅಮೇರಿಕಾದ ನಾಸಾ ಆರು ಪ್ರಶ್ನೆಗಳನ್ನು ಕೇಳಿತು. ಆ ಪ್ರಶ್ನೆಗಳಿಗೆ ಬಂದ ಉತ್ತರದ ಅಪೇಕ್ಷೆಯ ಮೇರೆಗೆ ಚಂದ್ರನ ಮೇಲೆ ದಾಳಿಯಿಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತೆಂದು ತಿಳಿಸಿದೆ. ಆದರೆ ಆ ಆರು ಪ್ರಶ್ನೆಗಳು ಮತ್ತು ಉತ್ತರಗಳು ಇಂದಿನ ಜಾಗತಿಕ ಸಮಸ್ಯೆಗಳ ಬೆಳಕಿನಲ್ಲಿ ಎಂಥ ಘಾತುಕವಾಗಿವೆ ಮತ್ತು ಹೇಗೆ ಮನುಕುಲದ ನಾಶಕ್ಕೆ ಕಾರಣವಾಗುತ್ತವೆಂಬುದು ಇಪ್ಪತ್ತೊಂದನೇ ಶತಮಾನದ ಈ ಭೂಲೋಕ, ಭೂಲೋಕದ ಪ್ರಾಣಿಸಂಕುಲ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಆ ಆರು ಉತ್ತರಗಳನ್ನು ಇಲ್ಲಿ ಗಮನಿಸಬೇಕಾದುದು ಅನಿವಾರ್ಯ.

೧. ಗತಕಾಲದ ನಾಗರಿಕತೆಗಳು ತಮ್ಮ ಎಲ್ಲೆಯಾಚೆಗಿರುವುದನ್ನು ಶೋಧಿಸುವ ಸಾಹಸ ಮಾಡಿದವು. ಇಂದಿನ ಯಶಸ್ವಿ ದೇಶಗಳು ತಮ್ಮ ವಾತಾವರಣದ ಆಚೆಗಿನದನ್ನು ಶೋಧಿಸುತ್ತವೆ. ಭವಿಷ್ಯದ ಯಶಸ್ವಿ ದೇಶಗಳು ಖಗೋಳದಲ್ಲಿ ಇನ್ನೂ ಆಚೆಗಿನದನ್ನು ಶೋಧಿಸುವವು.

೨. ಖಗೋಳ ಶೋಧಗಳು ನಮ್ಮ ದೈನಂದಿನ ಜೀವನವನ್ನು ಉತ್ತಮಗೊಳಿಸುವುದು. ಬಹಳ ಕಾಲದಿಂದಲೂ ವಾಣಿಜ್ಯೋದ್ಯಮ ಮತ್ತು ಕೈಗಾರಿಕೆಯ

ಜೊತೆ ನಾಸಾದ್ದು ಅವಿನಾಭಾವ ಸಂಬಂಧವಿದೆ. ಭವಿಷ್ಯದಲ್ಲಿ ವಾಣೀಜ್ಯೋದ್ಯಮದಿಂದ ಖಗೋಳ ಸಂಶೋಧನೆಗೆ ಬಹುವಾಗಿ ಸಹಾಯವಾಗುವ ಸಾಧ್ಯತೆಯಿದೆ.

೩.ಖಗೋಳ ಶೋಧನೆಗಳು ಹೊಸ ತಂತ್ರಜ್ಞಾನಗಳ ಪರೀಕ್ಷೆಗೆ ಅವಕಾಶಕಗಳನ್ನು ಒದಗಿಸುವುದಲ್ಲದೆ ಹೊಸ ಖಗೋಳ ಸ್ಥಳಗಳಲ್ಲಿಯ ವಾಸದ ಅನುಭವ ದೊರೆಯುವುದು. ಅಲ್ಲದೆ, ಆಕಾಶದಲ್ಲಿ ದೊರೆತ ಸಂಪನ್ಮೂಲಗಳನ್ನು ಮಂಗಳ ಮತ್ತು ಅದರಾಚೆ ಹೋಗುವ ಯಾತ್ರಿಗಳಿಗೆ ಸುರಕ್ಷತೆ ಒದಗಿಸುವುದಕ್ಕೆ ಉಪಯೋಗಿಸುವುದು.

೪. ಅಂತಾರಾಷ್ಟ್ರೀಯ ಆಶೋತ್ತರಗಳನ್ನು ನೆರವೇರಿಸಿದಲ್ಲಿ ಖಗೋಳ ಸಂಶೋಧನೆಯು ಬಹಳಷ್ಟು ಯಶಸ್ವಿಯಾಗುವುದು. ಅಂತಾರಾಷ್ಟ್ರೀಯ ಮಟ್ಟದ ಸಂಶೋಧನೆಯ ಕ್ರಮಗಳು ಸಂಪನ್ಮೂಲಗಳ ಹಾಗು ಕೌಶಲ್ಯದ ಗರಿಷ್ಠ ಉಪಯೋಗಕ್ಕೆ ನೆರವಾಗುವುವು. ತನ್ಮೂಲಕ ವ್ಯೋಮ ಮತ್ತು ಭೂಮಿಯ ಮೇಲಿನ ನಮ್ಮೆಲ್ಲರಿಗೆ ಪ್ರಯೋಜನವುಂಟಾಗುವುದು.

೫. ನಾವು ಭೂಮಿ ಮತ್ತು ಖಗೋಳ ಸ್ವರೂಪದ ಇತಿಹಾಸವನ್ನು ಚಂದ್ರನಲ್ಲಿಯ ಕುಳಿಗಳ ಅಗಲ ಮತ್ತು ಆಳದ ಅಧ್ಯಯನದಿಂದ ತಿಳಿಯಬಹುದು; ಈ ಜ್ಞಾನದೀಂದ ಚಂದ್ರನ ಮೂಲ ಮತ್ತು ಗ್ರಹಗಳ ಮೂಲವನ್ನು ತಿಳಿಯುವುದರ ಜೊತೆಗೆ ಜೀವದ ಅತ್ಯಂತ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಬಹುದು.

೬. ಖಗೋಳ ಶೋಧನೆ ಭವಿಷ್ಯದ ತಲೆಮಾರಿನ ಶೋಧಕರಿಗೆ ಹೇಗೆ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಗಣಿತ ಜ್ಞಾನಗಳನ್ನು ಜೀವನಕ್ಕೆ ಅನ್ವಯಿಸಬಹುದು ಎಂಬುದನ್ನು ಶೋಧಿಸಲು ಪ್ರೇರಣೆಕೊಡುವುದು.

ಚಂದ್ರನ ಮೇಲಿನ ದಾಳಿಗೆ ಕಾರಣಗಳೆಂದು ಹೇಳಲಾಗುತ್ತಿರುವ ಮೇಲಿನ ಆರು ಕಾರಣಗಳು ಜಗತ್ತಿನ ಬಲಾಢ್ಯ ದೇಶಗಳ ವಿಶ್ವವ್ಯಾಪಿ ವಸಾಹತುಗಳ ಸ್ಥಾಪನೆಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲವೆಂಬುದನ್ನು ಸ್ಪಷ್ಟವಾಗಿ ಸಾರುತ್ತವೆ. ಮುಂದುವರಿದ ದೇಶಗಳು ಚಂದ್ರನತ್ತ ಧಾವಿಸತೊಡಗಿದರೆ, ಅಲ್ಲಿ ವಸಾಹತುಗಳನ್ನು ಸ್ಥಾಪಿಸಲು ಪ್ರಾರಂಭಿಸಿದರೆ, ಅಲ್ಲಿಯ ಹೀಲಿಯಂನಂಥ ಬೆಲೆಬಾಳುವ ಖನಿಜಗಳ ಮೇಲೆ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಲು ಪ್ರಾರಂಭಿಸಿದರೆ, ಚಂದ್ರನನ್ನು ಸೈನ್ಯಾಚರಣೆಯ ತಂತ್ರಕ್ಕೆ ಉಪಯೋಗಿಸತೊಡಗಿದರೆ ಅಭಿವೃದ್ಧಿ ಹೊಂದುತ್ತಿರುವ ಭಾರತ ಮತ್ತು ಚೀಣಾದಂಥ ದೇಶಗಳು ಸಹ ಪರಿಸ್ಥಿತಿಯ ಅನಿವಾರ್ಯತೆಯಿಂದ ಚಂದ್ರನ ಕಡೆಗೆ ಹೋಗಲು ತೊಡಗಬೇಕಾಗುತ್ತದೆ. ತಮ್ಮ ಅತಿಯಾದ ಜನಸಂಖ್ಯಾ ಬಾಹುಳ್ಯದಿಂದಲೂ, ಬಡತನದಿಂದಲೂ, ನಿರುದ್ಯೋಗತೆಯಿಂದಲೂ ನರಳುತ್ತಿರುವ ಈ ದೇಶಗಳು ಚಂದ್ರಯಾನದ ಯೋಜನೆಗಾಗಿ ತಮ್ಮ ದೇಶಗಳ ಆದಾಯದ ಸಿಂಹಪಾಲನ್ನು ಖರ್ಚು ಮಾಡಬೇಕಾಗುತ್ತದೆ. ಭಾರತದ ಚಂದ್ರಯಾನಕ್ಕಾಗಿ ಸುಮಾರು ೬೦೦ ಕೋಟಿ ರುಪಾಯಿಗಳನ್ನು ಖರ್ಚು ಮಾಡಿತು; ಎರಡನೇ ಚಂದ್ರಯಾನಕ್ಕಾಗಿ ೪೨೫ ಕೋಟಿ ಖರ್ಚಾಗಲಿದೆ. ಮುಂಬರುವ ದುರಂತದ ಕಣ್ಸನ್ನೆಯಂತೆ ಅಕ್ಟೋಬರ್ ಒಂಭತ್ತರ ಚಂದ್ರನ ಮೇಲಿನ ದಾಳಿ ಮನುಕುಲದ ನಾಶಕ್ಕೆ ನಾಂದಿಯ ಸಂಕೇತವೋ ಎಂಬಂತೆ ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಎಂದೂ ಕಂಡರಿಯದಂಥ ಪ್ರವಾಹ ಉಂಟಾಗಿ ಹತ್ತು ಸಾವಿರ ಕೋಟಿಗೂ ಮಿಕ್ಕು ಬೆಳೆಯ ನಾಶ, ಮನೆಗಳ ನಾಶ ಮತ್ತು ಅಪಾರವಾದ

ಮಾನವ ಸಂಕಟ ಉಂಟಾಯಿತು.

ಈಗ ಮನುಕುಲದ ಮುಂದೆ ಇರುವ ಪ್ರಶ್ನೆಯೇನೆಂದರೆ ಚಂದ್ರ ಮತ್ತು ಇತರ ಗ್ರಹಗಳ ಮೇಲೆ ಜಗತ್ತಿನ ಬಲಾಢ್ಯ ದೇಶಗಳು ದಾಳಿ ಮಾಡುತ್ತಿರುವುದು ಸರಿಯೆ? ವೈಜ್ಞಾನಿಕ ಸಂಶೋಧನೆ, ಮಾನವನ ಕುತೂಹಲ, ಬುದ್ಧಿವಿಕಾಸ ಮುಂತಾದ ಕಾರಣಗಳಲ್ಲದೆ ಆ ದಾಳಿಗಳಿಗೆ ಯಾವ ಮಾನವೀಯ ಅಂಶಗಳ ಕಾರಣವಿದೆ? ಅಣು ಅಸ್ತ್ರಗಳ ತಯಾರಿಕೆಯ ಹಿಂದೆಯೂ ಸಹ ಅವೇ ಬೌದ್ಧಿಕ, ವೈಜ್ಞಾನಿಕ ಇತ್ಯಾದಿ ಕಾರಣಗಳಿದ್ದವಲ್ಲವೆ? ಆದರೆ ಅಣು ಅಸ್ತ್ರ ಕಂಡುಹಿಡಿದ ನಂತರ ಪಶ್ಚಾತ್ತಾಪಪಟ್ಟೆವಲ್ಲವೆ? ಕೈಗಾರಿಕಾ ಕ್ರಾಂತಿಯ ಹಿಂದೆಯೂ ಅವೇ ಕಾರಣಗಳಿದ್ದವಲ್ಲವೆ? ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿಯ ಶೋಧನೆಗಳಿಂದ ಮಾನವರು ದಾನವನಾಗುತ್ತಿದ್ದಾನೆ ಎಂಬುದನ್ನು ಇಂದು ಇಡೀ ಜಗತ್ತೇ ಹೇಳುತ್ತಿದೆ; ಜಗತ್ತಿನಲ್ಲಿರುವ ಕೋಟ್ಯಾನು ಕೋಟಿ ಜನರ ಅನುಭವ ಮತ್ತು ತಾಪಮಾನದಲ್ಲಿಯ ಹೆಚ್ಚಳ, ಪರಿಸರ ವಿನಾಶ ಮತ್ತು ಪ್ರಾಣಿಸಂಕುಲಗಳ ಗೋಳು, ದಿನೇದಿನೆ ಜಗತ್ತಿನಾದ್ಯಂತ ಬೆಳೆಯುತ್ತಿರುವ ಹಿಂಸೆ-ಕ್ರೌರ್ಯಗಳು-ರಕ್ತಪಾತ ಇತ್ಯಾದಿ. ಮಾತನ್ನು ದೃಢಪಡಿಸುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಮನುಷ್ಯನ ನೈತಿಕತೆಯನ್ನು ಎಳ್ಳಷ್ಟೂ ಹೆಚ್ಚಿಸಿಲ್ಲ. ಬದಲಿಗೆ ಅವನ ಅನೈತಿಕತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತನ್ನೂ, ಮನುಕುಲವನ್ನೂ ಎಂಥ ದುರಂತದ ಪ್ರಪಾತಕ್ಕೆ ತಂದು ನಿಲ್ಲಿಸಿದೆಯೆಂದರೆ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ತಮ್ಮ ಶೋಧನೆಗಳಿಗಾಗಿ ಪಶ್ಚಾತ್ತಾಪ ಪಡುವಂತಾಗಿದೆ. ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿಗಳು, "ಈ ವಿಜ್ಞಾನವೇ ಮನುಕುಲದ ಆತ್ಮಹತ್ಯೆಗೆ ಸಾಧನಗಳನ್ನು ಒದಗಿಸುವಂತಾದುದಕ್ಕಾಗಿ ನಮಗೆ ಆಘಾತವಾಗಿದೆ" ಎಂದು ಹೇಳಿದ್ದಾರೆ.

ಖಗೋಳ ಕ್ಷೇತ್ರದಲ್ಲಿಯ ದುಸ್ಸಾಹಸಗಳಿಗೆ ಅಮೇರಿಕಾದ ನೇತೃತ್ವವಿದೆ. ಬೇರೆಲ್ಲ ದೇಶಗಳು ಅಂಧ ವಿಶ್ವಾಸದಿಂದ ಆ ದೇಶವನ್ನು ಹಿಂಬಾಲಿಸುತ್ತಿವೆ. ಜಗತ್ತಿನಲ್ಲಿ ಎಲ್ಲೆಲ್ಲಿಯೂ ಅಶಾಂತಿ, ವರ್ಗ ಕಲಹ, ಧರ್ಮ ಸಂಘರ್ಷ, ದಾರಿದ್ರ್ಯದ ಹೆಚ್ಚಳ, ಹವಾಮಾನದ ವೈಪರಿತ್ಯ ಮುಂತಾದವುಗಳಿಗೆ ಕಾರಣವಾಗಿರುವ ಅಮೇರಿಕವನ್ನು ಉಳಿದ ದೇಶಗಳು ಕುರಿಗಳಂತೆ ಅನುಸರಿಸುತ್ತಿರುವುದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ಎಲ್ಲಿಯವರೆಗೆ ಜಗತ್ತಿನ ಇತರ ದೇಶಗಳು ಅಮೇರಿಕದ ಹುಚ್ಚು ಸಾಹಸಗಳಿಗೆ ಕಡಿವಾಣ ಹಾಕುವುದಿಲ್ಲವೋ ಅದರ ಸ್ವೇಚ್ಛಾಚಾರಕ್ಕೆ ಅಂಕುಶ ಹಾಕುವುದಿಲ್ಲವೋ ಅಲ್ಲಿಯವರೆಗೆ ಜಗತ್ತಿಗೆ ಸುಖವಿಲ್ಲ, ನೆಮ್ಮದಿಯಿಲ್ಲ, ಸಂತೋಷವಿಲ್ಲ. ಬರುವ ಡಿಸೆಂಬರ್ ತಿಂಗಳಿನಲ್ಲಿ ಕೂಪನ್‌ಹೇಗನ್‌ನಲ್ಲಿ ಪರಿಸರ ಕುರಿತಾದ ಸಭೆಯಲ್ಲಿ ಅಮೇರಿಕಾಕ್ಕೆ ಬುದ್ಧಿ ಹೇಳಲು ಅವಕಾಶವಿದೆ. ಆ ಅವಕಾಶವನ್ನು ಜಗತ್ತಿನ ದೇಶಗಳು ಕಳೆದುಕೊಳ್ಳಬಾರದು. ಕಳೆದುಕೊಂಡದ್ದೇ ಆದರೆ ಜಗತ್ತಿನ ಅರ್ಧಭಾಗ ಸಮುದ್ರದಲ್ಲಿ ಮುಳುಗಿಹೋಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಖಗೋಳ ಇಡೀ ಜಗತ್ತಿನ ಸ್ವೊತ್ತು. ಅದು ಅಮೇರಿಕಾದ ಮತ್ತು ಇತರ ಬಲಾಢ್ಯ ದೇಶಗಳ ಸ್ವಂತ ಆಸ್ತಿಯಲ್ಲ ಎಂಬುದನ್ನು ಜಗತ್ತು ಅರಿತುಕೊಳ್ಳಬೇಕಾದ ಕಾಲ ಬಂದಿದೆ.

* * *

ಮಮ ಸತ್ಯಂ ಮತ್ತು ಪಂಚಜನಾಃ

– *ವಿನೋಬಾ*

ಸತ್ಯವೆಂದರೇನು ಎಂದು ತಿಳಿಯುವ ಕ್ರಮದಲ್ಲಿ ವ್ಯತ್ಯಾಸವಾಗುತ್ತದೆ. ಯಾವುದು ಸತ್ಯವೆಂದನಿಸುತ್ತದೋ ಅದು ಎರಡನೆಯವನಿಗೆ ಸತ್ಯವೆಂದನಿಸುವುದಿಲ್ಲ. ವೇದದಲ್ಲಿ ಯುದ್ಧಕ್ಕೆ ಅನೇಕ ಶಬ್ದಗಳಿವೆ. ರಣ, ಯುದ್ಧ, ಸಮರ, ಮತ್ತೊಂದು 'ಮಮಸತ್ಯಂ'. ಪ್ರತಿಯೊಬ್ಬನೂ 'ನನ್ನದೇ ಸತ್ಯ' ಎಂದು ಹೇಳಿದರೆ ಯುದ್ಧವಾಗುತ್ತದೆ.

ಯಾಸ್ಕಾಚಾರ್ಯರು ಹೇಳಿದ್ದಾರೆ. 'ಮಮಸತ್ಯಂ ಯುದ್ಧಂ'. ಅಂದರೆ 'ಮಮಸತ್ಯವೇ ಯುದ್ಧ'. ಋಗ್ವೇದದಲ್ಲಿ ***ತ್ವಾಂ ಜನಾಃ ಮಮ ಸತ್ಯೇಷು ಇಂದ್ರ*** – ಹೇ ಇಂದ್ರ, ಜನರು ನಿನ್ನನ್ನು 'ಮಮಸತ್ಯದಲ್ಲಿ ತಮ್ಮ ಸಹಾಯಕ್ಕಾಗಿ ಕರೆಯುತ್ತಾರೆ. ಎರಡೂ ಪಕ್ಷಗಳು ಯುದ್ಧದಲ್ಲಿ ನಿನ್ನ ಸಹಾಯವನ್ನು ಕೇಳುತ್ತಾರೆ. ಹೀಗೊಂದು ವರ್ಣನೆ ಬರುತ್ತದೆ ಅದರಲ್ಲಿ ಯುದ್ಧಕ್ಕೆ 'ಮಮಸತ್ಯ' ಎಂದು ಹೇಳಲಾಗಿದೆ. ಸತ್ಯ ನನ್ನದು, ಇದರ ಹೆಸರು ಯುದ್ಧ. ಸತ್ಯ ನನ್ನದೇ, ಎದುರಾಳಿಯದು ಸತ್ಯವಲ್ಲ! ಸತ್ಯ ನನ್ನ ಅಪ್ಪನ ಆಸ್ತಿ, ಎದುರಾಳಿಯದು ಅದರ ಮೇಲೆ ಯಾವ ಹಕ್ಕೂ ಇಲ್ಲ. ಈ ರೀತಿಯಾಗಿ ಯಾವಾಗ ಜನ ಭಾವಿಸುತ್ತಾರೋ ಆಗ ಹೊಡೆದಾಟವಲ್ಲದೆ ಬೇರೆ ಮಾತಿಲ್ಲ.

ಪಂಚಜನಾಃ

ಒಬ್ಬ ಋಷಿ ಯಜ್ಞ ಮಾಡಿದ. ಆಗ ಅವನು ಐದು ಜನರನ್ನು ಅಂದರೆ, ಹಳ್ಳಿಯ ಪಂಚರನ್ನು ಕರೆದು ಹೀಗೆ ಪ್ರಾರ್ಥಿಸುತ್ತಾನೆ –

ಪಂಚ ಜನಾ ಮಮ ಹೋತ್ರಂ ಜುಷಂತಾಮ್ ಪಂಚಜನರೇ, ನಾನು ಯಾವ ಯಜ್ಞ ಮಾಡ ಹೊರಟಿರುವೆನೊ ಅದರ ಮೇಲೆ ನಿಮ್ಮ ಕೃಪೆಯಾಗಲಿ, ಅದನ್ನು ನೀವು ಸ್ವೀಕರಿಸಿರಿ. ನನ್ನ ಯಜ್ಞಕ್ಕೆ ಆಶೀರ್ವಾದ ಕೊಡಿ.

ವೇದದಲ್ಲಿ ಪಂಚ ಜನರು ಯಾರು ಎಂಬುದನ್ನು ಹೇಳಿಲ್ಲ. ಪಂಚಜನವೆಂದರೆ ನಾಲ್ಕುವರ್ಣ ಮತ್ತು ಆ ನಾಲ್ಕರಲ್ಲಿ ಸೇರದೆ ಇರುಂಥ ಮಾನವವಂಶ ಎಂದು ಭಾಷ್ಯಕಾರ ಹೇಳಿದ್ದಾನೆ. ನೀವು ಐದು ಜನವೆಲ್ಲ ನನ್ನ ಯಜ್ಞಕ್ಕೆ ಆಶಿರ್ವಾದ ಮಾಡಿರಿ. ಇಡೀ ಮಾನವ ಸಮುದಾಯದ ಸಹಯೋಗ ಯಜ್ಞದಲ್ಲಿ ಅಪೇಕ್ಷಿತವಾಗಿದೆ.

ಭಗವಂತನ ಶಂಖಕ್ಕೂ 'ಪಾಂಚಜನ್ಯ' ಅನ್ನುತ್ತಾರೆ. 'ಪಾಂಚಜನ್ಯ ಶಂಖ'ದ ಅರ್ಥ, ಭಗವಂತನ ಧ್ವನಿ. ಅದು ಪಂಚರನ್ನು ಪ್ರೇರಿಸುವಂಥದಾಗಿದೆ. ಇಡೀ ಮಾನವ ಕುಲವನ್ನು ಭಗವಂತನ ವಾಣಿಯ ಅಧಿಕಾರಿಯೆಂದಾಗಿ ತಿಳಿಯಲಾಯಿತು. ಉಪನಿಷತ್ತಿನಲ್ಲಿ ಕೂಡ ಪಂಚಜನಾಃ ಎಂಬುದು ಅನೇಕ ಬಾರಿ ಬಂದಿದೆ.

ರಕ್ತ, ಶ್ವೇತ, ಪೀತ, ಕೃಷ್ಣ, ಶ್ಯಾಮ ಎಂಬ ಐದು ಪ್ರಕಾರದ ಪ್ರಜೆಗಳು ಪ್ರಪಂಚದಲ್ಲಿದ್ದಾರೆ. ನನ್ನ ಪ್ರಕಾರ ರಕ್ತವೆಂದರೆ ರೆಡ್‌ಇಂಡಿಯನ್ಸ್. ಪೀತ ಅಂದರೆ ಜಪಾನಿಯರು. ಕೃಷ್ಣ ಅಂದರೆ ಹಬಶಿಯದಂಥ ಆಫ್ರಿಕಾದ ಜಾತಿಗಳು, ಶ್ಯಾಮ ಅಂದರೆ ಭಾರತೀಯರು. ಹಿಂದೂಸ್ತಾನದ ವಿಶೇಷ ವರ್ಣ ಶ್ಯಾಮ. ನಾವು ಶ್ಯಾಮ ವರ್ಣದ ಜನ. ಭಗವಾನ್ ಕೃಷ್ಣನಿಗೆ ಶ್ಯಾಮ ಸುಂದರ ಎಂಬಿತ್ಯಾದಿ ಶಬ್ದಗಳು ಪ್ರಚಲಿತವಾಗಿಯೇ ಇವೆ. ಕೃಷ್ಣ ಶಬ್ದದ ಅರ್ಥ ರೈತ. ಅಂದರೆ ವ್ಯವಸಾಯ ಮಾಡುವವ. ವ್ಯವಸಾಯ ಮಾಡುವವನ ಶರೀರದ ಬಣ್ಣ ಶ್ಯಾಮ. ಅದು ಕೃಷ್ಣನ ವರ್ಣ. ಇಂಥ ಪಂಚ ಜನರ ಉಲ್ಲೇಖ ವೇದದಲ್ಲಿ ಬರುತ್ತದೆ. ಅಲ್ಲದೆ, ಭಗವಂತನ ಶಂಖ ಪಾಂಚಜನ್ಯ. ಅದು ಈ ಐದು ಪಂಚ ಜನರಿಗಾಗಿ, ಅಂದರೆ ಇಡೀ ಜಗತ್ತಿಗೆ.

ವೇದವು ಭಾಷ್ಯ ಮಾಡುವುದಿಲ್ಲ. ಅದು ಪಂಚಜನಾಃ ಎಂದು ಮಾತ್ರ ಹೇಳುತ್ತದೆ. ಇನ್ನು ನೀವು ಈ ಪಂಚಜನರನ್ನು ಭಾರತಕ್ಕೆ ಮಾತ್ರ ಸೀಮಿತವೆಂದು ತಿಳಿಯಿರಿ ಅಥವಾ ಇಡೀ ಪ್ರಥ್ವೀವರೆಗೆ ವ್ಯಾಪಕವೆಂದು ತಿಳಿಯಿರಿ ಅದು ನಿಮ್ಮನ್ನು ಅವಲಂಬಿಸಿದೆ. ಆದರೆ "ಭಾರತದಲ್ಲಿ ಜನ್ಮ ಪಡೆದೆ, ಅದಕ್ಕಾಗಿ ಧನ್ಯ" ಎಂಬ ಮಾತು ವೇದದಲ್ಲಿ ದೊರೆಯುವುದಿಲ್ಲ. **ಪುತ್ರೊ ಅಹಂ ಪೃಥ್ವಿಯಾಃ** ವಿಶ್ವಮಾನುಷ ಶಬ್ದಕೂಡ ವೇದದಲ್ಲಿ ಸಿಗುತ್ತದೆ. ಆದ್ದರಿಂದ ಪಂಚಜನದಲ್ಲಿ ಇಡೀ ಜಗತ್ತಿನ ಹೆಸರನ್ನು ತೆಗೆದುಕೊಳ್ಳುವುದೇ ಉಚಿತವಾಗುವುದು.

'ಪಂಚರ ಮಾತು ಪರಮೇಶ್ವರ' ಎಂಬುದು ಭಾರತದ ನ್ಯಾಯವಾಗಿತ್ತು. ಇತ್ತೀಚಿಗೆ ನಮ್ಮಲ್ಲಿ ಪಂಚರಲ್ಲದವರ ನ್ಯಾಯ ನಡೆಯುತ್ತದೆ. ಮೂವರ ಮಾತೂ ಪರಮೇಶ್ವರ, ನಾಲ್ವರ ಮಾತೂ ಪರಮೇಶ್ವರ. ಆದರೆ ಹಿಂದೂಸ್ತಾನದಲ್ಲಿ ವೈದಿಕ ಕಾಲದಿಂದ ಸಂತರ ಕಾಲದವರೆಗೆ ಸ್ವೀಕರಿಸಲ್ಪಟ್ಟ ಯಾವ ಪದ್ಧತಿಯಿದೆಯೋ ಅದನ್ನು ಪಂಚ ಪರಮೇಶ್ವರ ಎಂದು ಅನ್ನುತ್ತಾರೆ. ಮರಾಠಿಯಲ್ಲಿ ಪಾಂಚಮುಖಿ ಪರಮೇಶ್ವರ ಎಂದೆನ್ನುತ್ತಾರೆ. ಐದು ಮುಖಗಳಲ್ಲಿ ಪರಮೇಶ್ವರ. ಅಂದರೆ ಸರ್ವ ಸಮ್ಮತಿ – ಒಂದು ಮತ. ಇದು ಭಾರತದ ಸಂಸ್ಕೃತಿ. ಇಷ್ಟು ವ್ಯಾಪಕ ಶಬ್ದವನ್ನು ಕೊಟ್ಟಿದೆ ವೇದ.

ಅನು ಜನನ್ ಯತತೇ ಪಂಚಧೀರಃ ಎಂಬ ವಾಕ್ಯ ವೇದದಲ್ಲಿ ಬರುತ್ತದೆ. ಹಳ್ಳಿಯಲ್ಲಿ ಇರುವ ಜ್ಞಾನಿಗಳು, ಬುದ್ಧಿವಂತರು ಹಳ್ಳಿಯ ವಿಷಯದಲ್ಲಿ ಪಂಚರ ಅಭಿಪ್ರಾಯಕ್ಕನುಸಾರವಾಗಿ ಸೇವೆ ಮಾಡುತ್ತಾರೆ. ಪಂಚರು ನಿರ್ಣಯಿಸಿದ ಪ್ರಕಾರ ಜ್ಞಾನಿ ಮನುಷ್ಯ ವ್ಯವಹಾರ ಮಾಡುತ್ತಾನೆ. ಪ್ರಾಚೀನಕಾಲದಿಂದ ಇಂದಿನವರೆಗೆ ನಡೆದು ಬಂದಿರುವ ಭಾರತದ ಪದ್ಧತಿ ಇದಾಗಿದೆ.

ಸಮಾಜವೆಂದರೆ ಸಹಸ್ರ ಶೀರ್ಷ ಪುರುಷ ಎಂದು ವೇದಗಳು ಭಾವಿಸಿವೆ. ಆದ್ದರಿಂದ ಭಿನ್ನ ಭಿನ್ನ ವರ್ಣದವರು ಈ ಸಮಾಜ ಪುರುಷನ ಅವಯವಗಳೆಂದು ಕಲ್ಪಿಸಿಕೊಳ್ಳಲಾಗಿದೆ. ಇಂಥ ಸ್ಥಿತಿಯಲ್ಲಿ ಯಾವುದೇ ಒಂದು ಅವಯವ ಕೊಳೆತುಬಿಟ್ಟಲ್ಲಿ ಉಳಿದೆಲ್ಲ ಅವಯವಗಳ ಮತ್ತು ಇಡೀ ಶರೀರದ ವ್ಯವಸ್ಥೆ ಹೇಗೆ ಉಳಿಯುವುದು?

ಚಾತುರ್ವರ್ಣದ ಅಥವಾ ವೇದಗಳ ಭಾಷೆಯಲ್ಲಿ ಪಂಚ ಜನಾಃದ ಯೋಜನೆ ಸಂಗ್ರಾಹಕ (ಇನ್‌ಕ್ಲೂಸಿವ್) ಸ್ವರೂಪದ್ದಾಗಿರುತ್ತದೆ. ವ್ಯಾವರ್ತಕ (ಎಕ್ಸ್‌ಕ್ಲೂಸಿವ್) ಸ್ವರೂಪದ್ದಾಗಿರುವುದಿಲ್ಲ. ಸಮಾಜಶಾಸ್ತ್ರದ ಪ್ರಕಾರ ಯಾವ ರೀತಿ ಸೈನ್ಯದಲ್ಲಿ ಅನುಕೂಲದ ದೃಷ್ಟಿಯಿಂದ ತುಕಡಿಗಳನ್ನು ಮಾಡಿರುತ್ತಾರೋ ಮತ್ತು ಸಾಧ್ಯವಾದಷ್ಟು ತಮ್ಮ ತಮ್ಮ ತುಕಡಿಯಲ್ಲಿದ್ದು ಕೆಲಸ ಮಾಡಬೇಕೆಂಬುದು ಸಿಪಾಯಿಯ ಕರ್ತವ್ಯವೆಂದು ತಿಳಿಯಲಾಗಿದೆಯೋ ಅದೇ ರೀತಿ ವ್ಯವಸ್ಥಾ ದೃಷ್ಟಿಯಿಂದ ಸಮಾಜವನ್ನು ವಿಭಾಗಿಸಲಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ವಾರ್ಣಿಕ ಕರ್ಮ ಮಾಡುತ್ತಿರಬೇಕು ಎಂಬುದರಲ್ಲಿಯೇ ಸಮಾಜ ಹಾಗು ವ್ಯಕ್ತಿಯದು ಕೂಡ ಕಲ್ಯಾಣವಿದೆ. ಆದರೆ ಈ ಎಲ್ಲ ವ್ಯವಸ್ಥೆಯಲ್ಲಿ ಒಂದು ಕಲ್ಪನೆ ಗ್ರಹೀತವಿದೆ. ಅದೆಂದರೆ ಯಾವ ವಿಶಿಷ್ಟ ವರ್ಣದ ವಿಶಿಷ್ಟ ಕೆಲಸದ ಜವಾಬ್ದಾರಿಯಿದೆಯೇ ಅದೇ ರೀತಿ ಎಲ್ಲರ ಸಾಮುದಾಯಿಕ ಕೆಲಸದ ಸರ್ವ ಸಾಧಾರಣ ಜವಾಬ್ದಾರಿ ಎಲ್ಲರಿಗೂ ಸಮಾನವಿದೆ.

'ಗೋರಕ್ಷಣೆ' ವೈಶ್ಯರ ಜವಾಬ್ದಾರಿಯೆಂದು ಭಾವಿಸಿ ಬ್ರಾಹ್ಮಣರು ಆ ವಿಷಯವನ್ನು ದುರ್ಲಕ್ಷ ಮಾಡಿದರೆ ಹೇಗೆ ನಡೆಯುವುದು? ಗೋರಕ್ಷಣೆ ಬ್ರಾಹ್ಮಣರ ಕೆಲಸವೂ ಆಗಿದೆ. ವೈಶ್ಯರದು ವಿಶಿಷ್ಟ ಕೆಲಸ ಎನ್ನುವಷ್ಟರ ಮಟ್ಟಿಗೆ ಮಾತ್ರ, ಪ್ರತ್ಯೇಕ ವರ್ಣದ ವಿಶೇಷ ಕರ್ಮ + ಎಲ್ಲ ವರ್ಣಗಳ ಸಾಧಾರಣ ಕರ್ಮ, ಇಷ್ಟು ಪ್ರತಿಯೊಬ್ಬರ ಮೇಲೆ ಜವಾಬ್ದಾರಿಯಿದೆ. ಒಂದು ವೇಳೆ ಹೀಗಾಗದೇ ಹೋದರೆ ಜಗತ್ತು ತುಂಡು ತುಂಡಾಗುವುದು.

'ಸಾಧಾರಣ'ದ ಕಾರಣದಿಂದ ಸಮಾಜವಾಗುತ್ತದೆ. 'ವಿಶೇಷ'ದ ಕಾರಣದಿಂದ ವ್ಯಕ್ತಿಯಾಗುತ್ತಾನೆ. 'ಸಾಧಾರಣ' ಬ್ರಹ್ಮನ ಅಂಶ, 'ವಿಶೇಷ' ಪ್ರಕೃತಿಯ ಅಂಶ. * * *

ಜನಪದ ಧ್ವನಿ

ನಾವು ಸರ್ಕಾರದ ಯಾವುದಾದರೂ ಕಛೇರಿಗೆ ಪತ್ರ ಬರೆದರೆ, ನಾಲ್ಕಾರು ಸಲ ಜ್ಞಾಪಿಸಿದರೂ ಉತ್ತರ ಬರುವುದಿಲ್ಲ. ಕಡೆಗೆ ನಾವೇ ಅಲ್ಲಿಗೆ ಹೋಗಿ ಸಂಬಂದಪಟ್ಟವರ ಮುಂದೆ ನಿಂತರೆ ಆ ಮಹಾನುಭಾವ ನಮ್ಮ ಕಡೆ ತಿರುಗಿನೋಡುವುದಿಲ್ಲ. ನಾವು ಸಾರ್, ಸಾರ್ ಎಂದು ಕರೆದು ನಮ್ಮ ಪತ್ರದ ಬಗ್ಗೆ ಕೇಳಿದರೆ ನಮ್ಮ ಪತ್ರ ಬಂದೇ ಇಲ್ಲ ಎನ್ನುತ್ತಾರೆ. ಸ್ವಾಮಿ ನಾಲ್ಕಾರು ಸಲ ಬರೆದಿದ್ದೇನೆ ರಿಜಿಸ್ಟರ್ ಪೋಸ್ಟ್‌ನಲ್ಲಿ ಕಳಿಸಿದ್ದೇನೆ ಎಂದೆಲ್ಲ ಹೇಳಿದರೆ ಆಗಲಿ ನೋಡೋಣ ಎರಡು ದಿನ ಬಿಟ್ಟು ಬನ್ನಿ ನೋಡುತ್ತೇನೆ ಎನ್ನುತ್ತಾರೆ. ಈತನ ಮೇಲಧಿಕಾರಿಗೆ ತಿಳಿಸಿದರೆ ಆ ಮಹಾನುಭಾವ ಈತನನ್ನು ಕರೆದು ಇವರ ಪತ್ರದ ವಿಷಯ ನೋಡಿ ಎಂದರೆ ಅದನ್ನೆ ನೋಡುತ್ತಿದ್ದೇನೆ ಎಂದು ಹೇಳಿ ಕಳಿಸುತ್ತಾರೆ. ನೀವು ಇನ್ನೂ ಮೊಂಡುತನ ಮಾಡಿದರೆ ಕಡೆಗೆ ನಿಮ್ಮ ವಿಷಯ ಪರಿಶೀಲನೆಯಲ್ಲಿದೆ ಎಂಬ ಒಂದು ವಾಕ್ಯದ ಉತ್ತರ ಬರುತ್ತದೆ. ಕಲಿಯುಗ ಮುಗಿಯುವವರೆಗೂ ಅದು ಪರಿಶೀಲನೆಯಲ್ಲೆ ಇರುತ್ತದೆ. ಇದರಿಂದ ಬೇಸರಗೊಂಡ ನೀವು ನಿಮ್ಮ ಕೆಲಸ ಆಗುವುದಕ್ಕೆ ವಾಮಮಾರ್ಗ ಅನುಸರಿಸಬೇಕಾಗುತ್ತದೆ. ಇದನ್ನು ತಪ್ಪಿಸಲು ಆಡಳಿತದಲ್ಲಿ ಪ್ರಾಮಾಣಿಕತೆ, ದಕ್ಷತೆ ತರಲು ಯಾರಾದರೂ ಪತ್ರ ಬರೆದರೆ ಅದು ತಲುಪಿದ ಒಂದು ವಾರದಲ್ಲಿ ಸ್ಪಷ್ಟವಾದ, ಖಚಿತವಾದ ಉತ್ತರ ಬರೆಯಲೇ ಬೇಕು, ಹಾಗೆ ಮಾಡದಿದ್ದರೆ ಶಿಕ್ಷಾರ್ಹ ಅಪರಾಧವಾಗುತ್ತದೆ ಎಂಬ ಆಜ್ಞೆ ಹೊರಡಿಸಿ ಜಾರಿಗೆ ತರಬೇಕು. ನಾವು ಕೇಳಿರುವುದು ಆಗುವುದಾದರೆ ಆಗುತ್ತದೆ, ಆಗದಿದ್ದರೆ ಇಂಥ ಕಾರಣಕ್ಕೆ ಆಗುವುದಿಲ್ಲ, ಬೇಕಾದಲ್ಲಿ ಇಂಥ ಮೇಲಧಿಕಾರಿಗಳಿಗೆ ಬರೆದುಕೊಳ್ಳಿ ಎಂಬ ಉತ್ತರವನ್ನು ಬರೆಯಬೇಕು. ಹೀಗೆ ಮಾಡಿದರೆ ಪ್ರಜಾಪ್ರಭುತ್ವ ನಿಜವಾಗುತ್ತದೆ. ಪ್ರಜೆ ಪ್ರಭುವಾಗುತ್ತಾನೆ. ಭ್ರಷ್ಟಾಚಾರ ಕಡಿಮೆ ಅಗುತ್ತದೆ. ಅಧಿಕಾರಿಗಳು ಬರವಣಿಗೆಯಲ್ಲಿ ಉತ್ತರಿಸುವಾಗ ಜವಾಬ್ದಾರಿಯಿಂದ ವರ್ತಿಸುತ್ತಾನೆ.

ಕೆಲವು ವರ್ಷಗಳ ಹಿಂದೆ ನನ್ನ ಸ್ನೇಹಿತರೊಬ್ಬರು ಅವರ ತಂದೆಯವರು ಸರ್ಕಾರದೊಡನೆ ನಡೆಸಿದ್ದ ಪತ್ರ ವ್ಯವಹಾರಗಳ ಫೈಲ್ ನೋಡಲು ನನಗೆ ಕೊಟ್ಟರು. ಅದರಲ್ಲಿ ಅವರು ತಮ್ಮ ಖಾಸಗಿ ಮತ್ತು ಸಾರ್ವಜನಿಕ ವಿಷಯಗಳ ಬಗ್ಗೆ ಬರೆದ ಪತ್ರಗಳು, ಅವಕ್ಕೆ ಬಂದ ಉತ್ತರಗಳು ಎಲ್ಲ ಇದ್ದವು. ಅವುಗಳ ಮಧ್ಯೆ ಅಂದಿನ ಆರು ಕಾಸಿನ ಪೋಸ್ಟ್ ಕಾರ್ಡ್ ಕಾಣಿಸಿತು. ನಾನು ಕುತೂಹಲದಿಂದ ಅದನ್ನು ಓದಿದೆ. ಇವರು ಸರ್ಕಾರಕ್ಕೆ ಬರೆದ ಪತ್ರ ಒಂದಕ್ಕೆ ಉತ್ತರವದಾಗಿತ್ತು. ಇವರು ಬರೆದ ಐದಾರು ದಿನಗಳಲ್ಲಿಯೇ ಉತ್ತರ ಬಂದಿತ್ತು. ಅದರಲ್ಲಿ ಬರೆದಿದ್ದ ವಿಷಯ ನೀವು ದಿವಾನರಿಗೆ ಇಂಥ ವಿಷಯದ ಬಗ್ಗೆ ಬರೆದ ಪತ್ರ ತಲುಪಿದೆ. ದಿವಾನರು ಪ್ರವಾಸದಲ್ಲಿದ್ದಾರೆ, ಇಂಥ ದಿನ ಬರುತ್ತಾರೆ, ಉತ್ತರಿಸುತ್ತಾರೆ ಎಂದು ಕಾರ್ಯದರ್ಶಿಯವರು ಬರೆದಿದ್ದರು. ಆಗ ದಿವಾನರಾಗಿದ್ದವರು ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶರಯ್ಯನವರು. ಯಾವುದೇ ವಾಣಿಜ್ಯ ಸಂಸ್ಥೆ ಕೂಡ ಇಷ್ಟು ಚುರುಕಾಗಿರುವುದಿಲ್ಲ. ಇಂಥ ಕಾರ್ಯತತ್ಪರತೆ, ಸಾಮಾಜಿಕ ಕಳಕಳಿ ಈಗ ಊಹಿಸಲು ಸಾಧ್ಯವೇ?

– *ಎ.ವೆಂಕಟರಮಣ ಶೆಟ್ಟಿ, ಮೈಸೂರು*

ಗಾಂಧೀ ಮತ್ತು ಟಾಗೋರ್

– ಗುರುದಯಾಳ್ ಮಲ್ಲಿಕ್

ಗಾಂಧೀ ಸತ್ಯ ಪ್ರೇಮಿಯಾಗಿದ್ದರು. ಅವರ ಸತ್ಯಪ್ರೇಮ ಮಾನವನ ಪ್ರತಿಯೊಂದು ವಿಚಾರ ಮತ್ತು ಕೃತಿಯ ಕ್ಷೇತ್ರದಲ್ಲಿ ಪ್ರಕಾಶಮಾನವೂ ಮತ್ತು ಅಪರಿಮಿತವೂ ಆಗಿತ್ತು. ಆದ್ದರಿಂದ ಅವರ ಇಡೀ ಜೀವನ ವಿಶಾಲ ಪ್ರಯೋಗಶಾಲೆಯಾಗಿತ್ತು. ಅದು ಓರ್ವ ವಿಜ್ಞಾನಿಯ ಆತ್ಮ ಸಮರ್ಪಣಾ ಭಾವನೆಯೊಂದಿಗೆ ರೂಪಿತಗೊಂಡ ಮುಗಿಯಿಲ್ಲದ ಪ್ರಯೋಗಗಳ ಮಹಾಗ್ರಂಥವಾಗಿದೆ.

ಟಾಗೋರ್ ಸೌಂದರ್ಯದ ಆರಾಧಕರಾಗಿದ್ದರು. ಆ ಆರಾಧನೆ ತುಂಬಾ ಲೌಕಿಕವಾಗಿತ್ತು. ಆದ್ದರಿಂದ ಅವರಿಗೆ ಜೀವನವು ತಾರೆಗಳ ತಾಳದೊಂದಿಗೆ ಸಂಯೋಜನೆಗೊಂಡು ಋತುಮಾನಗಳೊಂದಿಗೆ ಹಾಡಲಾದ ಕಾವ್ಯವಾಗಿತ್ತು.

ಗಾಂಧೀ ನೇಗಿಲು ಮತ್ತು ಚರಕದೊಂದಿಗೆ ಕೆಲಸ ಮಾಡಿದರು. ಅದು ಹಸಿದ ಮತ್ತು ಕಾರ್ಪಣ್ಯದ ಮಾನವಕುಲದ ಸೇವೆಯ ಉದ್ದೇಶವನ್ನು ಹೊಂದಿತ್ತು. ಏಕೆಂದರೆ ಹಸಿದ ಹೊಟ್ಟೆ ಎಂದೂ ಭಗವಂತನ ವಾಸಸ್ಥಾನವಾಗಲಾರದೆಂದು ಗಾಂಧೀ ದೃಢವಾಗಿ ನಂಬಿದ್ದರು.

ಟಾಗೋರ್‌ರು ಕೊಳಲನ್ನು ನುಡಿಸುತ್ತಿದ್ದರು. ಆ ಕೊಳಲಿನಿಂದ ಹೊಮ್ಮತ್ತಿದ್ದ ವರ್ಣರಂಜಿತ ವೈವಿಧ್ಯಮಯ ನುಡಿಗಳಿಂದ ಅವರು ಬೆಳೆಯುತ್ತಿರುವ ಮಕ್ಕಳು ದೈವೀ ಭಾವನೆಯ ಘನತೆಯೊಂದಿಗೆ ಮತ್ತು ಆತ್ಮ ಸಾಕ್ಷಾತ್ಕಾರದ ದೃಢ ಭಕ್ತಿಯೊಂದಿಗೆ ಮುನ್ನಡೆಯುವಂತೆ ಕಲಿಸುತ್ತಿದ್ದರು.

ಗಾಂಧೀ ತಮ್ಮ ಸಹಜೀವಿಗಳ ಬಗ್ಗೆ ಆಳವಾದ ಅನುಕಂಪವನ್ನು ಹೊಂದಿದ್ದರು. ಆದ್ದರಿಂದ ಅವರು ತಮ್ಮಲ್ಲಿದ್ದ ಶಾಸನಪ್ರೇಮವನ್ನು ಪ್ರೇಮಶಾಸನವನ್ನಾಗಿ ಪರಿವರ್ತಿಸಿದರು.

ಟಾಗೋರ್ ಕೂಡ ಅದೇ ರೀತಿ ಸ್ಪಂದಿತಗೊಂಡರು. ತಂದೆಯ ಮನೆಯಲ್ಲಿದ್ದ ರತ್ನಗಂಬಳಿ ಮತ್ತು ಮೃದುಪೀಠವನ್ನು ತ್ಯಜಿಸಿ ರಸ್ತೆಯ ಬದಿಯ ಗುಡಿಸಲನ್ನು ತಮ್ಮ ನಿವಾಸವನ್ನಾಗಿ ಮಾಡಿಕೊಂಡರು. ಪ್ರೇಮದ ಸ್ಪರ್ಶಮಣಿ ಮತ್ತು ಅಮೃತವಿರುವ ಹೃದಯವನ್ನು ತಲುಪಲು ಸಾಧ್ಯವಾಗುವಂತೆ ಕತ್ತಲಲ್ಲಿ ತಡವರಿಸುತ್ತಿರುವ ಪ್ರಯಾಣಿಕರಿಗೆ ಮಾರ್ಗ ತೋರಿಸುವ ದೀವಟಿಕೆಯಾಗಲು ಬಯಸಿದರು.

"ನಮ್ಮೊಂದಿಗೆ ಶ್ರಮಪಡಲು ಬಾ" ಎಂದು ತಾರೆಗಳು ಗಾಂಧಿಯ ಕಿವಿಗಳಲ್ಲಿ ಪಿಸುಗುಟ್ಟಿದವು.

"ಧರೆಗೆ ಬನ್ನಿ, ನಮ್ಮೊಂದಿಗೆ ಆಟವಾಡಿ" ಎಂದು ಟಾಗೋರ್ ತಾರೆಗಳತ್ತ ಕೂಗಿದರು.

ಗಾಂಧಿಗೆ ತನ್ನ ಸಹೋದರನಂತಿರುವ ಮನುಷ್ಯನಲ್ಲಿಯ ನೋವಿನ ಕಣ್ಣೀರು ಅವರ ನಿರಾಳತೆಗೆ ಮತ್ತು ಸುಖಕ್ಕೆ ಆಹ್ವಾನದಂತಿತ್ತು. ಟಾಗೋರ್‌ರಿಗೆ ದಾರಿಹೋಕನ ಬಾಗಿದ ಬೆನ್ನು ಅವರ ಸಂಗೀತದ ಮೋಡಿಗೆ ಮತ್ತು ಬೆಳದಿಂಗಳಿಗೆ ಆಹ್ವಾನದಂತಿತ್ತು. ಹೀಗೆ ಗಾಂಧೀ ಮತ್ತು ಟಾಗೋರ್ ಇಬ್ಬರ ಜೀವನ ಪವಿತ್ರವಾದ ಪ್ರೇಮ, ಪವಿತ್ರವಾದ ಶ್ರಮ ಮತ್ತು ಪವಿತ್ರವಾದ ಜ್ಞಾನದ ಸಂಗಮವಾಗಿತ್ತು.

* * *

ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ

– ಕುವೆಂಪು

ಇಂಗ್ಲಿಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸುವುದಕ್ಕಾಗಿಯೆ ವೆಚ್ಚಮಾಡಿದರೂ, ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿಹೊಂದುವುದರಲ್ಲಿ ಸಂದೇಹವಿಲ್ಲ.

ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲಾತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲಿ ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ ಅದು ಪ್ರಚ್ಛನ್ನವಾದ್ದರಿಂದಲೂ, ಅದರ ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿ ನೆಮ್ಮದಿಯ ಭಾವದಲ್ಲಿ ಈಗಲೆ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.

ನಿಮ್ಮ ಕಣ್ಣು ಮುಂದೆಯೆ ನಡೆಯುತ್ತಿರುವ ಒಂದು ಖಚಿತವೂ ಮುಷ್ಟಿ ಗ್ರಾಹ್ಯವೂ ಆದ ನಿದರ್ಶನ ತೆಗೆದುಕೊಂಡರೆ ವಿಷಯ ಸ್ಪಷ್ಟತರವಾಗುತ್ತದೆ. ಈ ವರ್ಷದಿಂದ ಅನೇಕ ಹೈಸ್ಕೂಲುಗಳಲ್ಲಿ ಹನ್ನೊಂದನೆಯ ತರಗತಿಯನ್ನು ತೆರೆದಿದ್ದಾರೆ. ಹನ್ನೊಂದನೆಯ ತರಗತಿ ವಿಶ್ವವಿದ್ಯಾನಿಲಯದ ಪ್ರೀಯುನಿವರ್ಸಿಟಿ ಕೋರ್ಸಿಗೆ ಸಮವಾದದ್ದು. ಪಿ.ಯು.ಸಿ.ಯಲ್ಲಿಯ ೧೯೫೮ರಿಂದ ಕನ್ನಡ ಶಿಕ್ಷಣ ಮಾಧ್ಯಮದ ಸೆಕ್ಷನ್‌ಗಳನ್ನು ತೆರೆಯಲಾಯಿತು. ಅದಕ್ಕೆ ಬೇಕಾದ ಎಲ್ಲ ಪಠ್ಯಪುಸ್ತಕಗಳೂ ಸಿದ್ಧವಾದವು. ಫಲಿತಾಂಶಗಳೂ ಆಶ್ಚರ್ಯವಾಗುವ ಮಟ್ಟಿಗೆ ಉತ್ತಮಗೊಳ್ಳುತ್ತಾ ಬಂದಿವೆ. ಹೀಗಿರುವಲ್ಲಿ, ಗಾಳಿಯಲ್ಲಿಯೂ ಇಂಗ್ಲಿಷಿನ ಗಂಧವಿಲ್ಲದ ಹಳ್ಳಿಗಾಡಿನ ಹೈಸ್ಕೂಲುಗಳಲ್ಲಿ, ಪಿ.ಯು.ಸಿ.ಗೆ ಸಮನಾಗಿ ಹನ್ನೊಂದನೆಯ ತರಗತಿಗಳನ್ನು ತೆರೆದು, ಎಸ್. ಎಸ್.ಎಲ್.ಸಿ.ವರೆಗೆ ಕನ್ನಡ ಮಾಧ್ಯಮದಲ್ಲಿಯೆ ಓದಿದ್ದ ಹುಡುಗರಿಗೆ, ಇಂಗ್ಲಿಷಿನಲ್ಲಿ ಒಂದು ಸ್ವತಂತ್ರ ವಾಕ್ಯವನ್ನು ರಚಿಸಲು ಸಾಮರ್ಥ್ಯವಿಲ್ಲದ ವಿದ್ಯಾರ್ಥಿಗಳಿಗೆ, ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿ – (ಬಲಾತ್ಕಾರವಾಗಿ ಎಂಬುದನ್ನು ತಾವು ಗಮನಿಸಬೇಕು, ಕನ್ನಡ ಮಾಧ್ಯಮವನ್ನು ಸಂಪೂರ್ಣವಾಗಿ ಬಹಿಷ್ಕರಿಸಿರುವುದು ಮಾತ್ರವಲ್ಲದೆ ಆ ತರಗತಿಗಳಲ್ಲಿ ಕನ್ನಡದಲ್ಲಿ ಮಾತನಾಡಲೆ ಕೂಡದು ಎಂಬ ಸುಗ್ರೀವಾಜ್ಞೆಯೂ ಹೊರಟಿದೆಯಂತೆ) – ಹಾಗೆ

ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿದುದರ ಉದ್ದೇಶವೇನೋ ಗೊತ್ತಾಗುವುದಿಲ್ಲ. ಮುಂದಿನ ವರ್ಷದ ಪರೀಕ್ಷೆಗಳಲ್ಲಿ ನೀವೆ ನೋಡುತ್ತೀರಿ – ಆ ಹಿಂದುಳಿದ ಗ್ರಾಮ ಪ್ರದೇಶದ ವಿದ್ಯಾರ್ಥಿಗಳು ನೂರಕ್ಕೆ ನೂರೂ ಉದುರಿಹೋಗುತ್ತಾರೆ! ಇದಕ್ಕೆ ಯಾರು ಕಾರಣರು: ಎಸ್.ಎಸ್.ಎಲ್.ಸಿ. ಕನ್ನಡ ಮಾಧ್ಯಮದಲ್ಲಿ ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿ ನಾಲ್ಕನೆಯ ಅಥವಾ ಐದನೆಯ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿ ಪಿ.ಯು.ಸಿ.ಯ ಇಂಗ್ಲಿಷ್ ಮಾಧ್ಯಮದಲ್ಲಿ ಎರಡೋ ಮೂರೋ ವರ್ಷ ಫೈಲ್ ಆದರೆ ಅದಕ್ಕೆ ಯಾರು ಕಾರಣ: ವಿದ್ಯಾರ್ಥಿಯೋ? ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿದ ಅದೂರದೃಷ್ಟಿಯ ಅಧಿಕಾರವರ್ಗವೋ? ರಾಜ್ಯದ ಆಡಳಿತ ವಹಿಸಿಕೊಂಡಿರುವ ಸಚಿವ ಮಂಡಲಿಯೋ? ಆ ಸಚಿವ ಮಂಡಲಿಗೆ ಕಾರಣರಾದ ಜನತಾ ಪ್ರತಿನಿಧಿಗಳೊ? ಆ ಪ್ರತಿನಿಧಿಗಳನ್ನು ಆರಿಸಿರುವ – ವಿದ್ಯಾರ್ಥಿವರ್ಗದ ತಂದೆ ತಾಯಿಯರೆ ಆಗಿರುವ ಜನತೆಯೊ? ಯಾರು? ಎಂತಾದರಿರಲಿ:

ನಾಡ ಬದುಕಿನ ಬೇರನ್ನೆ ಹಿಡಿದಿರುವ ಈ ಕೇಡಿನ ಕಡೆಗೆ ತಮ್ಮ ಗಮನವನ್ನು ಸೆಳೆದಿದ್ದೇನೆ, ಅಷ್ಟೆ. ಶಾಸನಕರ್ತರಾದ ತಮಗೆ ಬಿಟ್ಟದ್ದು ಮುಂದಿನ ಕ್ಷೇಮಂಕರ ಕರ್ತವ್ಯ.

ಮಹನೀಯರೆ, ಔತಣದ ತುದಿಯಲ್ಲಿ ಹಾಗಲಕಾಯಿ ತಿನ್ನಿಸುವಂತೆ, ಕೃತಜ್ಞತಾ ಸೂಚನಾರ್ಥವಾಗಿ ಮಾಡಿರುವ ನನ್ನ ಭಾಷಣವನ್ನು ಈ ಸಮಸ್ಯಾಕಟುತ್ವದಿಂದ ಕೊನೆಗಾಣಿಸದಿರುವುದು ಅಕ್ಷಮ್ಯ ಅಪರಾಧವಾದೀತು. ಬಿಡಿಸುವ ಸಮಸ್ಯೆಗಳೇನೋ ಯಾವಾಗಲೂ ಇದ್ದೇ ಇರುತ್ತವೆ. ಎಲ್ಲ ಮುಗಿಯಿತು ಎಂಬ ಕಾಲ ಎಂದಿಗೂ ಬರುವುದಿಲ್ಲ. ನಿರಂತರ ಹೋರಾಟವೆ ಸಜೀವತ್ವದ ಲಕ್ಷಣವಲ್ಲವೆ?

ಆದರೆ ಈ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಎಂತೆಂತಹ ಸಮಸ್ಯೆಗಳು ಪರಿಹಾರವಾಗಿವೆ? ಎಂತೆಂತಹ ಹೋರಾಟಗಳಲ್ಲಿ ಜಯಗಳಿಸಿದ್ದೇವೆ? ಎಂತೆಂತಹ ಮಹತ್ ಸಾಧನೆಗಳನ್ನು ಕೈಗೊಂಡು ಸಿದ್ಧಿ ಪಡೆದಿದ್ದೇವೆ. ಯಾವ ಯಾವ ವಲಯಗಳಲ್ಲಿ ಎಂತೆಂತಹ ನವೋದಯಗಳನ್ನು ಉತ್ಥಾನಗೊಳಿಸಿದ್ದೇವೆ. ನೆನೆದರೆ, ರೋಮಾಂಚನವಾಗದಿರಲು ಸಾಧ್ಯವಿಲ್ಲ. ಭಾರತದಂತಹ ಮಹಾ ರಾಷ್ಟ್ರದ ಸ್ವಾತಂತ್ರ ಸಾಧನೆಯೊಂದೇ ಸಾಲದೆ ಒಂದು ಶತಮಾನದ ಹಿಗ್ಗಿಗೆ?

ಈ ಸಮಾರಂಭಕ್ಕೆ ಪ್ರಕೃತವಾದ ಸಾಹಿತ್ಯ ಕ್ಷೇತ್ರದಲ್ಲಂತೂ ಪೂರ್ವೋಕ್ತ ಅವಧಿಯಲ್ಲಿ, ಕನ್ನಡಿಗರು ಅದ್ಭುತ ಕಾರ್ಯಸಾಧನೆ ಮಾಡಿದ್ದಾರೆ. ಇತರ ಯಾವ ದೇಶದ ಯಾವ ಸಾಹಿತ್ಯಕ್ಕೂ ಬಿಟ್ಟುಕೊಡದ ಪ್ರಮಾಣದಲ್ಲಿ ಮಹೋನ್ನತ ಶಿಖರಗಳನ್ನೇರಿ ನಿಂತಿದ್ದಾರೆ. ಧಾರವಾಡದಲ್ಲಿ ಶ್ರೀ ನಿಜಲಿಂಗಪ್ಪನವರಿಂದ ಉದ್ಘಾಟಿತವಾಗಿ ನಡೆದ ಸಾಹಿತ್ಯ ಸಮ್ಮೇಲನದ ನನ್ನ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತನ್ನು ಇಲ್ಲಿ ಮತ್ತೊಮ್ಮೆ ಧೈರ್ಯವಾಗಿ ಘೋಷಿಸಬಯಸುತ್ತೇನೆ: "ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು: ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ."

ಕನ್ನಡಿಗರ ಆ ಅಭ್ಯುದಯದ ಮತ್ತು ಶ್ರೇಯಸ್ಸಿನ ಮಹಾ ವಿಜಯಕ್ಕೆ ಕಿರೀಟ ಪ್ರಾಯವಾದ ಸಂಕೇತ ಸಾಕ್ಷಿಯಾಗಿದೆ, ನಾಡಿನ ಕವಿಯೊಬ್ಬನಿಗೆ ನಾಡಿನ ಮಹಾಜನರ ಪ್ರತಿನಿಧಿಗಳಾದ ತಾವು, ಇಂದು, ಈ ಸಮಾರಂಭದಲ್ಲಿ, ಆಶೀರ್ವಾದಪೂರಕವಾಗಿ ನೀಡುತ್ತಿರುವ ಈ 'ರಾಷ್ಟ್ರಕವಿ' ಪ್ರಶಸ್ತಿ. ಆ ಗೌರವ ಪ್ರದಾನಕ್ಕಾಗಿ ನಾನು ಮತ್ತೊಮ್ಮೆ ತಮ್ಮೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಅನಂತಾನಂತ ನಮಸ್ಕಾರಗಳನ್ನೂ ನಿವೇದಿಸುತ್ತೇನೆ.

* * *

ಗಾಂಧೀ – ನೆಹರೂ ಪತ್ರತ್ತೋರ

ನೆಹರೂಗೆ ಪತ್ರ ೧೯೪೫ರಲ್ಲಿ

ಚಿ.ಜವಹರಲಾಲ್, ಅಕ್ಟೋಬರ್ ೫, ೧೯೪೫

ಬಹಳ ಸಮಯದಿಂದಲೂ ನಿನಗೆ ಬರೆಯಬೇಕು ಅಂತ ಯೋಚಿಸುತ್ತಿದ್ದೆ. ಆದರೆ ಬರೆಯಲು ಸಾಧ್ಯವಾದದ್ದು ಮಾತ್ರ ಇವೊತ್ತು. ಇಂಗ್ಲಿಷ್‌ನಲ್ಲಿ ಬರೆಯುವುದೋ ಅಥವಾ ಹಿಂದುಸ್ತಾನಿಯಲ್ಲಿ ಬರೆಯುವುದೋ ಅಂತಲೂ ಯೋಚಿಸುತ್ತಿದ್ದೆ. ಕಡೆಗೆ ಹಿಂದುಸ್ತಾನಿಯಲ್ಲೇ ಬರೆಯುವುದೆಂದು ನಿರ್ಧರಿಸಿದೆ.

ಮೊದಲಿಗೆ, ನಮ್ಮಿಬ್ಬರ ಅಭಿಪ್ರಾಯಗಳ ನಡುವೆ ತೀವ್ರವಾದ ಭಿನ್ನತೆ ಬೆಳೆದುಕೊಳ್ಳುತ್ತಿರುವುದನ್ನು ಕುರಿತು ಪ್ರಸ್ತಾಪಿಸುತ್ತೇನೆ. ಈ ಅಭಿಪ್ರಾಯಭೇದವು ನಮ್ಮಲ್ಲಿ ನಿಜವಾಗಿ ಇರುವುದೇ ಆದರೆ ಅದು ಜನರಿಗೆ ಕೂಡಾ ತಿಳಿಯಬೇಕು. ಜನರಿಗೆ ಕಾಣಿಸದೆ ಅದನ್ನು ಮುಚ್ಚಿಟ್ಟರೆ ಅದರಿಂದ ಸ್ವರಾಜ್ಯದ ಕೆಲಸಗಳು ಕುಂಠಿತಗೊಳ್ಳುತ್ತವೆ. 'ಹಿಂದ್ ಸ್ವರಾಜ್'ನಲ್ಲಿ ನಾನು ವಿವರಿಸಿರುವ ಆಡಳಿತ ಪದ್ಧತಿಯನ್ನು ಈಗಲೂ ನಾನು ಸಮರ್ಥಿಸುತ್ತೇನೆ. ಅದನ್ನು ಏನೋ ಒಂದು ಮಾತಿನ ಲಹರಿ ಅಂತ ತಿಳಿಯಬಾರದು. ೧೯೦೯ರಲ್ಲಿ ನಾನು ಏನು ಬರೆದಿದ್ದೆನೋ ಅದರ ಸತ್ಯವನ್ನು ನನ್ನ ಅನುಭವಗಳು ದೃಢೀಕರಿಸಿವೆ. 'ಹಿಂದ್ ಸ್ವರಾಜ್'ನಲ್ಲಿನ ಪ್ರತಿಪಾದನೆಗಳನ್ನು ನಂಬುವವರಲ್ಲಿ ಈಗ ನಾನೊಬ್ಬನೇ ಉಳಿದುಕೊಂಡಿದ್ದೇನೆ ಎನ್ನುವುದಾದರೂ ಅದಕ್ಕಾಗಿ ನನಗೆ ಚಿಂತೆಯಿಲ್ಲ. ಏಕೆಂದರೆ, ನನಗೆ ಕಾಣುವ ಸತ್ಯವನ್ನು ಮಾತ್ರವೇ ನಾನು ದೃಢೀಕರಿಸಲು ಸಾಧ್ಯ. 'ಹಿಂದ್ ಸ್ವರಾಜ್' ಪುಸ್ತಕವು ಈಗ ನನ್ನ ಎದುರಿನಲ್ಲಿಲ್ಲ. ಅಲ್ಲಿ ನಾನು ಕೊಟ್ಟಿರುವ ಚಿತ್ರವನ್ನು ಇವತ್ತು ನನ್ನ ಭಾಷೆಯಲ್ಲೇ ಪುನರ್ರಚಿಸಿ ಹೇಳುವುದು ಒಳ್ಳೆಯದೆನ್ನಿಸುತ್ತದೆ. ಇದು, ೧೯೦೯ರ ನನ್ನ ಮಾತುಗಳಿಗೆ ತಾಳೆಯಾಗುತ್ತದೆಯೋ ಇಲ್ಲವೋ ಎನ್ನುವುದು ಮುಖ್ಯವಲ್ಲ; ನಿನಗೂ ಅದು ಮುಖ್ಯವಾಗಬೇಕಿಲ್ಲ. ಅವತ್ತು ಹೇಳಿದ್ದನ್ನು ಇವತ್ತು ನಾನು ಸಮರ್ಥಿಸಬೇಕಾದ ಅಗತ್ಯವೂ ಇರುವುದಿಲ್ಲ. ಇವತ್ತು ನಾನು ಏನು ಹೇಳುವುದಿದೆ ಎನ್ನುವುದಷ್ಟೇ ಈಗ ಮುಖ್ಯವಾಗುತ್ತದೆ. ಭಾರತ ಮತ್ತು ಭಾರತದ ಮೂಲಕವಾಗಿ ಜಗತ್ತು ನಿಜವಾದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕೆಂದರೆ, ಈಗಲೋ ಮುಂದೆಯೋ ಎಂದಾದರೂ ನಾವು ಹಳ್ಳಿಗಳಿಗೆ ಹೋಗಿ ಬದುಕತೊಡಗಬೇಕು – ಹಳ್ಳಿ ಗುಡಿಸಲುಗಳಲ್ಲಿ, ಅರಮನೆಗಳಲ್ಲಲ್ಲ. ಕೋಟ್ಯಂತರ ಜನರು ನಗರಗಳಲ್ಲಿ ಮತ್ತು ಅರಮನೆಗಳಲ್ಲಿ ಸುಖಶಾಂತಿಯಿಂದ ಬದುಕಲಿಕ್ಕೆ ಯಾವತ್ತೂ ಸಾಧ್ಯವಿಲ್ಲ. ಅಥವಾ ಒಬ್ಬರನ್ನೊಬ್ಬರು ಕೊಂದುಕೊಳ್ಳುತ್ತ, ಅಂದರೆ ಹಿಂಸೆ ಅಸತ್ಯಗಳಿಗೆ ಶರಣಾಗಿಕೊಂಡು ಬದುಕುವುದೂ ಅಸಾಧ್ಯ. ಸತ್ಯ ಮತ್ತು ಅಹಿಂಸೆಗಳ ಜೋಡಿಗಾಲಿಗಳನ್ನವಲಂಬಿಸಿಕೊಳ್ಳದೆ ಹೋದರೆ ಮನುಷ್ಯಕುಲವು ನಾಶವಾಗಿ ಹೋಗುತ್ತದೆ ಎನ್ನುವುದರಲ್ಲಿ ನನಗೆ ಕಿಂಚಿತ್ತೂ ಸಂಶಯವಿಲ್ಲ. ಹಳ್ಳಿಗಳ ಸರಳತೆಯಲ್ಲಿ ಮಾತ್ರವೇ ಸತ್ಯ ಹಾಗು ಅಹಿಂಸೆಯ

ದರ್ಶನವನ್ನು ಪಡೆದುಕೊಳ್ಳಲು ಸಾಧ್ಯ. ಆ ಸರಳತೆಯು ನೂಲುಚಕ್ರ ಹಾಗೂ ನೂಲುಚಕ್ರವು ಸಂಕೇತಿಸುವಂಥ ಸಂಗತಿಗಳಲ್ಲೇ ನೆಲೆಸಿಕೊಂಡಿದೆ. ಪ್ರಪಂಚವು ಇದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಸಾಗುತ್ತಿರುವಂತೆ ಕಾಣುತ್ತಿದೆಯಲ್ಲ ಎಂದರೆ, ಅದರಿಂದ ನಾನು ಭಯಗೊಳ್ಳುವುದಿಲ್ಲ. ವಸ್ತುಸ್ಥಿತಿಯೆಂದರೆ, ಉರಿದುಹೋಗಲಿರುವ ಸಮಯದಲ್ಲಿ ಕೀಟವು ಹೆಚ್ಚುಹೆಚ್ಚು ವೇಗದಿಂದ ದೀಪವನ್ನು ಸುತ್ತತೊಡಗುತ್ತದೆ, ಉರಿದು ನಾಶವಾಗುವತನಕ. ಭಾರತವು ಇಂಥ ದೀಪಭ್ರಮಣದಿಂದ ತಪ್ಪಿಸಿಕೊಳ್ಳಲಾರದು ಎನ್ನುವುದೂ ನಿಜವೇ ಇರಬಹುದು. ಆದರೆ, ಭಾರತವನ್ನು ಮತ್ತು ಜಗತ್ತನ್ನು ಇಂಥ ದುರ್ವಿಧಿಯಿಂದ ರಕ್ಷಿಸಲು ನಾನು ನನ್ನ ಕೊನೆಯ ಉಸಿರಿನತನಕ ಪ್ರಯತ್ನಿಸುತ್ತೇನೆ. ಅದು ನನ್ನ ಕರ್ತವ್ಯ. ನಾನು ಹೇಳುವುದೆಲ್ಲದರ ಒಟ್ಟೂ ಸಾರ–ತಾತ್ಪರ್ಯವೆಂದರೆ, ಒಬ್ಬ ವ್ಯಕ್ತಿಯು ಬಾಳಿಕೊಳ್ಳಲಿಕ್ಕೆ ಏನೇನು ಅಗತ್ಯವೋ ಅಂಥವುಗಳ ಮೇಲೆ ಆತನಿಗೆ ನಿಯಂತ್ರಣವಿರುವಂತಾಗಬೇಕು. ಇಂಥ ನಿಯಂತ್ರಣವಿಲ್ಲದಿದ್ದರೆ ಅವರು ಬಾಳಲಾರ. ಕಡೆಗೂ ಈ ಜಗತ್ತು ವ್ಯಕ್ತಿಗಳಿಂದ ನಿರ್ಮಾಣಗೊಂಡಿರುವಂಥದು. ಹನಿಗಳಿಲ್ಲದಿದ್ದರೆ ಸಮುದ್ರವಿರುತ್ತಿರಲಿಲ್ಲ. ಇದಿಷ್ಟು ನನ್ನ ಕರಡು ಪ್ರತಿಪಾದನೆ. ಆದರೆ ಇದರಲ್ಲಿ ಹೊಸತೆಂಬುದು ಏನೂ ಇಲ್ಲ.

'ಹಿಂದ್ ಸ್ವರಾಜ್'ನಲ್ಲಿ ಕೂಡ ನಾನು ಇದೆಲ್ಲವನ್ನೂ ಹೇಳಿಲ್ಲ. ಆಧುನಿಕ ಚಿಂತನವನ್ನು ನಾನು ಅರ್ಥಮಾಡಿಕೊಂಡು ಮೆಚ್ಚುತ್ತೇನೆ. ಮತ್ತು, ಈ ಚಿಂತನದ ಹಿನ್ನೆಲೆಯಲ್ಲಿ, ಪ್ರಾಚೀನ ಸಂಗತಿಗಳು ನನಗೆ ಬಲು ಹಿತವಾಗಿ ಕಾಣಿಸುತ್ತವೆ. ನಾನು ಇವತ್ತಿನ ಹಳ್ಳಿಗಳ ಬಗ್ಗೆ ಹೇಳುತ್ತಿದ್ದೇನೆ ಅಂತ ನೀನು ತಿಳಿದರೆ, ನನ್ನನ್ನು ಅರ್ಥಮಾಡಿಕೊಳ್ಳಲಾರೆ. ನನ್ನ ಆದರ್ಶ ಹಳ್ಳಿಯು ನನ್ನ 'ಕಲ್ಪನೆ'ಯಲ್ಲಿ ಮಾತ್ರವೇ ಇರುವಂಥದು. ಹೇಗೂ, ಪ್ರತಿಯೊಬ್ಬ ಮನುಷ್ಯಜೀವಿಯೂ ತನ್ನ ಸ್ವಂತ 'ಕಲ್ಪನೆ'ಯಲ್ಲಿಯೇ ಬದುಕಿಕೊಂಡಿರುತ್ತಾನೆ. ನನ್ನ ಕನಸಿನ ಇಂಥ ಹಳ್ಳಿಯಲ್ಲಿ ಹಳ್ಳಿಗನು ಯಾವನೂ ಆಲಸಿಯಾಗಿರುವುದಿಲ್ಲ, ಇಡೀ ಎಚ್ಚರವೇ ಆಗಿರುತ್ತಾನೆ. ಆತ, ಕೊಳಕಲ್ಲಿ ಕತ್ತಲಲ್ಲಿ ಪ್ರಾಣಿಗಳ ಹಾಗೆ ಬದುಕುತ್ತಿರುವುದಿಲ್ಲ. ಗಂಡಸರು ಹೆಂಗಸರು ಸ್ವತಂತ್ರರಾಗಿ ಇಡೀ ಜಗತ್ತಿಗೇ ಮುಖಾಮುಖಿಯಾಗಲು ಸಜ್ಜುಗೊಂಡವರಾಗಿರುತ್ತಾರೆ. ಅಲ್ಲಿ ಪ್ಲೇಗು, ಕಾಲರಾ, ಮೈಲಿ ಬೇನೆಗಳಿರುವುದಿಲ್ಲ. ಯಾವನೂ ಆಲಸಿಯಾಗಿದ್ದುಕೊಳ್ಳಲಿಕ್ಕೆ ಅಥವಾ ವೈಭವದಲ್ಲಿ ತೇಲಾಡಿಕೊಳ್ಳಲಿಕ್ಕೆ ಅವಕಾಶವಿರುವುದಿಲ್ಲ. ಪ್ರತಿಯೊಬ್ಬನೂ ದೇಹಶ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಇದಿಷ್ಟು ಸಾಧಿಸಿದ ಮೇಲೆ, ದೊಡ್ಡ ಪ್ರಮಾಣದಲ್ಲಿ ಸಂಘಟಿಸಬೇಕಾದ ಅನೇಕ ಸಂಗತಿಗಳನ್ನು ಕೂಡಾ ನಾನು ಕಲ್ಪಿಸಿಕೊಳ್ಳಬಲ್ಲೆ. ಪ್ರಾಯಶಃ, ಅಲ್ಲಿ ರೈಲ್ವೆಗಳೂ ಇರಬೇಕಾಗುತ್ತದೆ, ಪೋಸ್ಟ್ ಟೆಲಿಗ್ರಾಫ್‌ಗಳು ಇರಬೇಕಾಗುತ್ತದೆ. ಅಲ್ಲಿ ಏನಿರುತ್ತವೆ ಏನಿರುವುದಿಲ್ಲ ಎಂಬುದು ನನಗೆ ತಿಳಿಯದು. ಆ ಬಗ್ಗೆ ನನಗೆ ಯೋಚನೆಯೂ ಇಲ್ಲ. ಮೂಲದ್ರವ್ಯವೊಂದು ಭದ್ರವಾಗಿದೆ ಎನ್ನುವುದಾದರೆ, ಉಳಿದವೆಲ್ಲ ಕ್ರಮೇಣ ತಾನಾಗಿ ರೂಪುಗೊಂಡು ಸೇರಿಕೊಳ್ಳುತ್ತವೆ. ಆದರೆ ಮೂಲದ್ರವ್ಯವನ್ನೇ ನಾನು ಕಳೆದುಕೊಂಡರೆ ಸಮಸ್ತವನ್ನೂ ಕಳೆದುಕೊಳ್ಳುತ್ತೇನೆ.

ಆ ದಿನ ಕಾರ್ಯಕಾರಿ ಸಮಿತಿಯ ಕೊನೆಯ ದಿನದ ಸಭೆಯಲ್ಲಿ, ಈ ಒಂದು ವಿಷಯದ ಬಗ್ಗೆಯೇ ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸಲು ಎರಡು ಅಥವಾ ಮೂರು ದಿನಗಳ ಸಮಾವೇಶವೊಂದನ್ನು ಕೂಡಿಸಬೇಕು ಎಂಬ

ನಿರ್ಣಯವಾಗಿತ್ತು. ಹಾಗೆ ಅದು ಸಭೆ ಸೇರುವುದಾದರೆ ನನಗೆ ಸಂತೋಷ. ಒಂದುವೇಳೆ ಅದು ಹಾಗೆ ಕೂಡದೇ ಹೋದರೂ, ನಾವಿಬ್ಬರು ಒಬ್ಬರನ್ನೊಬ್ಬರು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು ಎನ್ನುವುದು ನನ್ನ ಅಪೇಕ್ಷೆ. ಇದಕ್ಕೆ ಎರಡು ಕಾರಣಗಳಿವೆ. ನಮ್ಮ ನಂಟು ಕೇವಲ ರಾಜಕಾರಣದ್ದಲ್ಲ. ಅದಕ್ಕಿಂತಲೂ ಎಷ್ಟೋ ಆಳವಾದದ್ದು. ಆ ಆಳವನ್ನು ಅಳೆಯುವ ಮಾಪನವೇ ನನ್ನಲ್ಲಿಲ್ಲ. ಈ ನಂಟು ಯಾವತ್ತು ಕಡಿಯಲಾರದ ನಂಟು. ಆದಕಾರಣವೇ ರಾಜಕೀಯದಲ್ಲಿಯೂ ನಾವು ಒಬ್ಬರನ್ನೊಬ್ಬರು ಬಹು ನಿಚ್ಚಳವಾಗಿ ಅರ್ಥಮಾಡಿಕೊಳ್ಳಬೇಕಾದ್ದು ಅಗತ್ಯ. ಎರಡನೆಯ ಕಾರಣವಂದರೆ, ನಮ್ಮಿಬ್ಬರಲ್ಲಿ ಯಾರೂ ತನ್ನನ್ನು ನಿಷ್ಪ್ರಯೋಜಕವೆಂದು ಭಾವಿಸಿಕೊಂಡವರಲ್ಲ. ನಾವಿಬ್ಬರೂ ಭಾರತದ ಸ್ವಾತಂತ್ರ್ಯಕ್ಕಾಗಿ ಮಾತ್ರವೇ ಬದುಕಿದ್ದೇವೆ ಮತ್ತು ಸ್ವಾತಂತ್ರ್ಯಕ್ಕಾಗಿ ಸಾಯಲು ಕೂಡಾ ಸಂತೋಷಪಡುತ್ತೇವೆ. ಯಾವುದೇ ಕಡೆಗಳಿಂದ ಬರುವ ಹೊಗಳಿಕೆಗಳ ಬಗ್ಗೆ ನಮಗೆ ಲಕ್ಷ್ಯವಿಲ್ಲ. ಹೊಗಳಿಕೆ ತೆಗಳಿಕೆಗಳೆರಡೂ ನಮಗೆ ಒಂದೇ. ನಮ್ಮ ಸೇವಾ ಸಂಕಲ್ಪದಲ್ಲಿ ಅವಕ್ಕೆ ಸ್ಥಾನವಿಲ್ಲ. ಸೇವೆ ಸಲ್ಲಿಸುತ್ತ ನೂರಿಪ್ಪತ್ತೈದು ವರ್ಷ ನಾನು ಬದುಕಲು ಹಂಬಲಿಸುತ್ತೇನಾದರೂ, ಈಗ ಮುದುಕನಾಗಿದ್ದೇನೆ; ನೀನಿನ್ನೂ ಹೋಲಿಕೆಯಲ್ಲಿ ಎಳೆಯನಾಗಿರುವೆ. ಅದಕ್ಕಾಗಿಯೇ ನಾನು ನಿನ್ನನ್ನು ನನ್ನ ಉತ್ತರಾಧಿಕಾರಿ ಅಂತ ಹೇಳಿದ್ದೇನೆ. ಕನಿಷ್ಠಪಕ್ಷ, ನಾನು ನನ್ನ ಉತ್ತರಾಧಿಕಾರಿಯನ್ನು ಅರ್ಥಮಾಡಿಕೊಳ್ಳಬೇಕಾದ್ದು ಮತ್ತು ಪ್ರತಿಯಾಗಿ, ನನ್ನ ಉತ್ತರಾಧಿಕಾರಿಯು ನನ್ನನ್ನು ಅರ್ಥಮಾಡಿಕೊಳ್ಳಬೇಕಾದ್ದು ಸಮಂಜಸವಲ್ಲವೆ? ಆಗಲೇ ನನಗೆ ನೆಮ್ಮದಿಯಾಗುತ್ತದೆ.

ಇನ್ನೊಂದು ವಿಷಯ: ಕಸ್ತೂರಿಬಾ ಟ್ರಸ್ಟ್ ಮತ್ತು ಹಿಂದುಸ್ತಾನಿಯ ಬಗ್ಗೆ ನಿನಗೆ ನಾನು ಬರೆದಿದ್ದೆ. ನೀನು ಆ ಬಗ್ಗೆ ಯೋಚಿಸಿ ಆನಂತರ ಬರೆಯುವುದಾಗಿ ತಿಳಿಸಿದ್ದೆ. ಹಿಂದುಸ್ತಾನಿ ಸಭಾದಲ್ಲಿ ಈಗಾಗಲೇ ನಿನ್ನ ಹೆಸರು ಇರುವುದನ್ನು ಕಂಡಿದ್ದೇನೆ. ನಾನಾವತಿ ಅವರು ನಿನ್ನನ್ನೂ ಮೌಲಾನಾ ಸಹೇಬರನ್ನೂ ಭೇಟಿಮಾಡಿದಾಗ ನೀವು ರುಜುಹಾಕಿಕೊಟ್ಟದ್ದಿರಿ ಎನ್ನುವುದನ್ನು ಅವರು ನನಗೆ ನೆನಪಿಸಿದ್ದಾರೆ. ಅದು ೧೯೪೨ರಲ್ಲಿ, ಬಹಳ ಸಮಯ ಹಿಂದೆ ನಡೆದ್ದು.ಇವತ್ತು ಹಿಂದುಸ್ತಾನಿ ಮಹಾಸಭಾ ಯಾವ ಸ್ಥಿತಿಯಲ್ಲಿದೆ ಎನ್ನುವುದು ಗೊತ್ತಲ್ಲ? ಈಗಲೂ ನೀನು ಆ ಹಳೆಯ ರುಜುವಿಗೆ ಬದ್ಧನಾಗಿರುವ ಪಕ್ಷದಲ್ಲಿ, ನಿನ್ನಿಂದ ಸಭಾದ ಕೆಲವು ಕೆಲಸಗಳಾಗಬೇಕು ಅಂತ ನನ್ನ ಅಪೇಕ್ಷೆ. ಅದರಲ್ಲಿ ಹೆಚ್ಚಿನ ತಿರುಗಾಟಗಳೇನೂ ಇರುವುದಿಲ್ಲ. ಆದರೆ, ಕೆಲವು ಕೆಲಸಗಳಂತೂ ಇರುತ್ತವೆ.

ಕಸ್ತೂರಿ ಬಾ ಸ್ಮಾರಕ ಟ್ರಸ್ಟ್‌ನ ಕೆಲಸವು ಸ್ವಲ್ಪ ತೊಡಕಾದದ್ದೇ. ನಾನು ಮೇಲೆ ಪ್ರಸ್ತಾಪಿಸಿರುವ ಸಂಗತಿಯು ನಿನ್ನನ್ನು ಬೇಸರಗೊಳಿಸುವುದಾದರೆ, ಕಸ್ತೂರಿ ಬಾ ಟ್ರಸ್ಟ್ ವಿಷಯ ಕೂಡಾ ನಿನಗೆ ಹಿತವೆನಿಸಲಾರದು.

ಕಡೆಯ ವಿಷಯ, ಶರತ್‌ಬಾಬು ಜೊತೆಗಿನ ವಿರೋಧದ ಸಂಬಂಧದಲ್ಲಿ ಕೆದರಿ ಹಾರಾಡಿಕೊಳ್ಳುತ್ತಿರುವ ಕಿಡಿಗಳನ್ನು ಕುರಿತದ್ದು. ಈ ಘಟನೆಯಿಂದ ನನಗೆ ನೋವಾಗಿದೆ. ಅದನ್ನು ಬೇರಿನ ತನಕ ಬಿಡಿಸಿಕೊಳ್ಳುವುದು ನನಗೆ ಸಾಧ್ಯವಾಗಿಲ್ಲ. ನೀನು ನನ್ನ ಹತ್ತಿರ ಹೇಳಿರುವುದಷ್ಟೇ ವಿಷಯವಾಗಿದ್ದರೆ ಮತ್ತು ಅದಲ್ಲದೆ ಹೆಚ್ಚಿನದು ಇನ್ನೇನೂ ಇಲ್ಲದಿದ್ದರೆ, ಆ ಬಗ್ಗೆ ನಾನು ಮತ್ತೂ ಶೋಧಿಸುತ್ತ ಹೋಗಬೇಕಾದ್ದಿರುವುದಿಲ್ಲ.

ಈ ಸಂಬಂಧದಲ್ಲಿ ಏನಾದರೂ ವಿವರಣೆ ಕೊಡಬೇಕಾದ್ದು ಇದೆಯೆನ್ನುವುದಾದರೆ, ಅದನ್ನು ಕೇಳಿಕೊಳ್ಳಲು ಬಯಸುತ್ತೇನೆ.

ಈ ಎಲ್ಲಾ ವಿಷಯಗಳನ್ನು ಸಿಕ್ಕು ಬಿಡಿಸಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಬಗ್ಗೆ ನಾವಿಬ್ಬರೂ ಒಮ್ಮೆ ಕೂಡಬೇಕೆಂದಾದರೆ, ಅದಕ್ಕೆ ನಾವು ಅವಕಾಶಮಾಡಿಕೊಳ್ಳಬೇಕು.

ನೀನು ಬಹಳ ಶ್ರಮಪಟ್ಟು ಕೆಲಸಮಾಡುತ್ತಿದ್ದೀಯೆ. ನಿನ್ನ ಆರೋಗ್ಯ ಚೆನ್ನಾಗಿದೆಯೆಂದು ನಂಬುತ್ತೇನೆ. ಇಂದು ಕೂಡಾ ಚೆನ್ನಾಗಿದ್ದಾಳೆಂದು ತಿಳಿಯುತ್ತೇನೆ.

ಆಶೀರ್ವಾದಗಳು,

ಬಾಪು

ಗಾಂಧಿ ಪತ್ರಕ್ಕೆ ನೆಹರೂ ಉತ್ತರ

ಆನಂದಭವನ
ಅಲಹಾಬಾದ್,
ಅಕ್ಟೋಬರ್ ೯, ೧೯೪೫

ನನ್ನ ಪ್ರೀತಿಯ ಬಾಪು,

ಇವತ್ತು ಲಕ್ನೋದಿಂದ ನಾನು ಮರಳಿಬಂದಾಗ ನಿಮ್ಮ ಅಕ್ಟೋಬರ್ ೬ರ ಪತ್ರ ಸಿಕ್ಕಿತು. ನೀವು ಇಡಿಯಾಗಿ ಬರೆದಿರುವುದು ನನಗೆ ಸಂತೋಷ. ನಾನೂ ಸ್ವಲ್ಪ ವಿವರವಾಗಿ ಉತ್ತರಿಸಲು ಯತ್ನಿಸುತ್ತೇನೆ. ಆದರೆ ಸದ್ಯದಲ್ಲಿ ನಾನು ಇಡಿಕಿರಿದ ಕಾರ್ಯಕಾಕ್ರಮಗಳಿಗೆ ಕಟ್ಟುಬಿದ್ದಿರುವುದರಿಂದ, ನನ್ನ ಉತ್ತರವು ತಡವಾಗುತ್ತಿದ್ದರೆ ನೀವು ಕ್ಷಮಿಸುತ್ತೀರೆಂದು ಭಾವಿಸುತ್ತೇನೆ. ಈಗ ನಾನಿಲ್ಲಿರುವುದು ಒಂದೂವರೆ ದಿನ ಮಾತ್ರ. ಕೂತು ಮಾತಾಡಿಕೊಳ್ಳುವುದೇ ನಿಜವಾಗಿ ಒಳ್ಳೆಯದು. ಆದರೆ ಅದಕ್ಕೆ ಯಾವಾಗ ಅವಕಾಶ ಮಾಡಿಕೊಳ್ಳಲಿಕ್ಕಾದೀತೋ ತಿಳಿಯುತ್ತಿಲ್ಲ. ಪ್ರಯತ್ನಿಸುತ್ತೇನೆ.

ಸಂಕ್ಷೇಪವಾಗಿಟ್ಟರೆ ನನ್ನ ಅಭಿಪ್ರಾಯ ಹೀಗೆ: ನಮಗೆ ಎದುರಿರುವ ಪ್ರಶ್ನೆಯು, ಸತ್ಯ ಮತ್ತು ಅಸತ್ಯಗಳ ಅಥವಾ ಅಹಿಂಸೆ ಅಥವಾ ನಡುವಣ ವಿರೋಧದ ಪ್ರಶ್ನೆಯಲ್ಲ. ನಿಜವಾದ ಸಹಕಾರ ಮತ್ತು ಶಾಂತಿಯುತ ಕಾರ್ಯಮಾರ್ಗಗಳು ನಮ್ಮ ಗುರಿಯೆಂದು ಭಾವಿಸಬೇಕು ಹಾಗೂ ಅಂಥ ಉದ್ದೇಶವನ್ನು ಪ್ರೋತ್ಸಾಹಿಸುವ ಸಮಾಜವು ನಮ್ಮ ಲಕ್ಷ್ಯವಾಗಬೇಕು. ಇಡೀ ಪ್ರಶ್ನೆಯೆಂದರೆ, ಇಂಥ ಸಮಾಜವನ್ನು ರೂಪಿಸುವುದು ಹೇಗೆ ಮತ್ತು ಅದರಲ್ಲಿ ಪ್ರಧಾನವಾದ ಮೌಲ್ಯ ಏನಿರಬೇಕು ಎನ್ನುವುದೇ. ಕೇವಲ ಹಳ್ಳಿಯು ಮಾತ್ರವೇ ಏತಕ್ಕೆ ಸತ್ಯ ಮತ್ತು ಅಹಂಸೆಗಳನ್ನು ಒಳಗೊಳ್ಳಬಲ್ಲದ್ದಾಗುತ್ತದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಸಾಮಾನ್ಯವಾಗಿ ಹೇಳುವುದಾದರೆ, ಹಳ್ಳಿಯು ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುತ್ತದೆ ಹಾಗೂ ಅಂಥ ಹಿಂದುಳಿದ ಪರಿಸರದಿಂದ ಪ್ರಾರಂಭಿಸಿ ಯಾವ ಪ್ರಗತಿಯನ್ನೂ ತರಲಿಕ್ಕಾಗುವುದಿಲ್ಲ. ಅಲ್ಪಮನಸ್ಸಿನ ಜನರೇ ಅಸತ್ಯವಂತರೂ ಹಿಂಸಾಕಾರಿಗಳೂ ಆಗಿರುವ ಸಾಧ್ಯತೆ ಹೆಚ್ಚು.

ಇದಾದಮೇಲೆ ಮತ್ತೆ, ಸಾಕೆನ್ನುವಷ್ಟು ಆಹಾರ, ಬಟ್ಟೆ, ವಸತಿ, ಶಿಕ್ಷಣ, ನೈರ್ಮಲ್ಯ ಮುಂತಾದ – ದೇಶಕ್ಕೂ ಮತ್ತು ಪ್ರತಿಯೊಬ್ಬ ಪ್ರಜೆಗೂ ಕನಿಷ್ಠ ಅಗತ್ಯವಾಗಿರುವಂಥ ಸಂಗತಿಗಳನ್ನು ಗುರಿಯಾಗಿ ಹಾಕಿಕೊಳ್ಳಬೇಕು. ಈ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವುಗಳನ್ನು ಹೇಗೆ ಬಹು ತ್ವರಿತವಾಗಿ ಸಾಧಿಸುವುದೆನ್ನುವುದನ್ನು

ನಿಚ್ಚಳವಾಗಿ ಕಂಡುಕೊಳ್ಳಬೇಕು. ಪುನಃ ಸಂಚಾರಸಂಪರ್ಕಗಳ ಆಧುನಿಕ ಸಾಧನಗಳು ಹಾಗೂ ಇನ್ನಿತರ ಆಧುನಿಕ ನವಶೋಧಗಳನ್ನು ಮುಂದುವರೆಸಿಕೊಳ್ಳಬೇಕಾದ್ದು ಮತ್ತು ಅಭಿವೃದ್ಧಿಪಡಿಸಿಕೊಳ್ಳಬೇಕಾದ್ದು ಅನಿವಾರ್ಯವೆಂದು ನನಗೆ ಕಾಣಿಸುತ್ತದೆ. ಅವುಗಳನ್ನು ನಾವು ಇಟ್ಟುಕೊಳ್ಳಬೇಕಲ್ಲದೆ ಬೇರೆ ಇನ್ನೊಂದು ದಾರಿಯೇ ಇಲ್ಲ. ಇದು ನಿಜವಾದರೆ, ಕೆಲಮಟ್ಟಿನ ಬೃಹತ್ ಉದ್ಯಮಗಳೂ ಅನಿವಾರ್ಯವಾಗಿ ಇರಬೇಕಾಗುತ್ತದೆ. ಶುದ್ಧ ಗ್ರಾಮೀಣ ಸಮಾಜವೇ ಇರುವುದಾದಲ್ಲಿ, ಇಂಥವೆಲ್ಲಾ ಅದರೊಳಗೆ ಹೇಗೆ ಅಳವಟ್ಟುಕೊಳ್ಳಬಲ್ಲವು? ಬೃಹತ್ ಅಥವಾ ಕಿರು ಉದ್ಯಮಗಳಾವುವೇ ಇರಲಿ, ಅವು ಸಾಧ್ಯವಾದಮಟ್ಟಿಗೆ ವಿಕೇಂದ್ರೀಕೃತವಾಗಿರತಕ್ಕದ್ದು ಎನ್ನುವುದು ನನ್ನ ನಂಬಿಕೆ. ವಿದ್ಯುತ್ ಶಕ್ತಿಯ ಅಭಿವೃದ್ಧಿಯಿಂದಾಗಿ ಈಗ ಅದು ಸಾಧ್ಯವೂ ಹೌದು. ದೇಶದಲ್ಲಿ ಎರಡು ರೀತಿಯ ಅರ್ಥವ್ಯವಸ್ಥೆಗಳು ಅಸ್ತಿತ್ವದಲ್ಲಿರುವುದಾದರೆ, ಅವು ಒಂದಕ್ಕೊಂದು ಸದಾ ಸೆಣಸಾಡಿಕೊಳ್ಳುತ್ತಿರಬೇಕಾಗುತ್ತದೆ, ಇಲ್ಲವೆ ಒಂದು ಇನ್ನೊಂದನ್ನು ಮುಳುಗಿಸಿಬಿಡುತ್ತದೆ.

ಈ ಸಂದರ್ಭದಲ್ಲಿ, ರಾಜಕೀಯ ಆರ್ಥಿಕ ಕ್ಷೇತ್ರಗಳೆರಡರಲ್ಲೂ ಸ್ವತಂತ್ರರಾಗಬೇಕಾದ ಮತ್ತು ವಿದೇಶಿ ಆಕ್ರಮಣಸಾಧ್ಯತೆಗಳಿಂದ ರಕ್ಷಿಸಿಕೊಳ್ಳಬೇಕಾದ ಪ್ರಶ್ನೆಯನ್ನೂ ಪರಿಗಣಿಸಬೇಕಾಗುತ್ತದೆ. ಭಾರತವು ತಂತ್ರಜ್ಞಾನದಲ್ಲಿ ಅಭಿವೃದ್ಧಿಗೊಂಡ ದೇಶವಾಗದಿದ್ದ ಪಕ್ಷದಲ್ಲಿ ಅದು ನಿಜವಾಗಿಯೂ ಸ್ವತಂತ್ರವಾಗಲು ಸಾಧ್ಯ ಎಂದು ನಾನು ತಿಳಿಯಲಾರೆ. ಈ ಕ್ಷಣದಲ್ಲಿ ನಾನು ಸೈನ್ಯಬಲವನ್ನು ಕುರಿತು ಯೋಚಿಸುತ್ತಿಲ್ಲ; ವೈಜ್ಞಾನಿಕ ಅಭಿವೃದ್ಧಿಯ ಬಗ್ಗೆ ಯೋಚಿಸುತ್ತಿದ್ದೇನೆ. ನಮ್ಮ ಪ್ರತಿಯೊಂದು ಕ್ಷೇತ್ರದಲ್ಲಿಯೂ ವೈಜ್ಞಾನಿಕ ಸಂಶೋಧನೆಯ ಗಟ್ಟಿಯಾದ ಹಿನ್ನೆಲೆಯಿಲ್ಲದೆಯೇ, ಇವತ್ತಿನ ಪ್ರಪಂಚಸನ್ನಿವೇಶದಲ್ಲಿ, ನಾವು ಸಾಂಸ್ಕೃತಿಕವಾಗಿ ಕೂಡಾ ಮುಂದುವರೆಯಲಾರೆವು. ಪ್ರಪಂಚದಲ್ಲಿ ಇವತ್ತು ಸಂಗ್ರಹಣ ಒಡೆತನಗಳ ಭಯಂಕರ ಲಾಲಸೆ ಹುಟ್ಟಿಕೊಂಡಿದೆ; ಇದು ವ್ಯಕ್ತಿಯಲ್ಲಿ, ಗುಂಪುಗಳಲ್ಲೂ ರಾಷ್ಟ್ರಗಳಲ್ಲಿಯೂ ಕಾಣಿಸಿಕೊಳ್ಳುತ್ತಿರುವುದರಿಂದ, ಆ ಪ್ರವೃತ್ತಿಯೇ ನಮ್ಮನ್ನು ವಿರೋಧ, ವೈರ ಮತ್ತು ಯುದ್ಧಗಳ ಕಡೆಗೆ ಒಯ್ಯುತ್ತಿದೆ. ಹೆಚ್ಚು ಕಡಿಮೆ ನಮ್ಮ ಇಡೀ ಸಮಾಜವೇ ಈ ಅಸ್ತಿವಾರದ ಮೇಲೆ ನಿಂತಿದೆ. ಈ ಅಸ್ತಿವಾರವು ಹೋಗಬೇಕು ಮತ್ತು ನಾವು ಇದಕ್ಕೆ ಬದಲು ಸಹಕಾರದ ಅಸ್ತಿವಾರವನ್ನು ಹಾಕಿಕೊಳ್ಳಬೇಕು. ಹೊರಗೆ ಏಕಾಂಗಿಯಾಗಿ ನಿಲ್ಲುತ್ತೇವೆನ್ನುವುದು ಅಸಾಧ್ಯ. ಇದಿಷ್ಟನ್ನು ಒಪ್ಪಿಕೊಂಡರೆ ಮತ್ತು ಇದು ಸಾಧ್ಯವೆಂದು ನಂಬಿದರೆ, ಆಗ ಅದನ್ನು ಸಾಧಿಸಲು, ಇಡೀ ಜಗತ್ತಿನಿಂದ ಹೊರಗೆ ಕತ್ತರಿಸಿಟ್ಟ ಒಂದು ಅರ್ಥವ್ಯವಸ್ಥೆಯನ್ನು ಯೋಚಿಸದೆ, ಜಗತ್ತಿನ ಜೊತೆ ಸಹಕರಿಸುವ ಅರ್ಥವ್ಯವಸ್ಥೆಯನ್ನು ಯೋಚಿಸಿ ಆ ಬಗ್ಗೆ ಪ್ರಯತ್ನ ನಡೆಸಬೇಕಾಗುತ್ತದೆ. ಏಕಾಂಗಿಯಾಗಿ ನಿಲ್ಲುವ ಭಾರತವು ಆರ್ಥಿಕ ಅಥವಾ ರಾಜಕೀಯ ದೃಷ್ಟಿಯಿಂದ, ಒಂದು ಬಗೆಯ ಶೂನ್ಯಸ್ಥಳವಾಗಿ ಮಾರ್ಪಟ್ಟು, ಉಳಿದ ರಾಷ್ಟ್ರಗಳ ಆಕ್ರಮಣ-ಸಂಗ್ರಹಣ ಪ್ರವೃತ್ತಿಯನ್ನು ಮತ್ತೂ ಹೆಚ್ಚಿಸಿಬಿಡಬಹುದು; ಆ ರೀತಿಯಲ್ಲಿ ಇನ್ನೂ ಹೆಚ್ಚಿನ ವೈರ ಕಾದಾಟಗಳಿಗೆ ಕಾರಣವಾಗಬಹುದು.

ಕೋಟ್ಯಂತರ ಜನಕ್ಕೆ ಅರಮನೆಗಳನ್ನು ನಿರ್ಮಿಸುವ ಪ್ರಶ್ನೆಯೇ ಇಲ್ಲ. ಆದರೆ, ಕೋಟ್ಯಂತರ ಜನರಿಗೆ, ಸುಸಂಸ್ಕೃತ ಜೀವನ ನಡೆಸಿಕೊಳ್ಳಲು ಬೇಕಾದಷ್ಟು

ಸೌಕರ್ಯವುಳ್ಳ ಆಧುನಿಕ ವಸತಿಯಿರಬಾರದು ಎನ್ನಲು ಕಾರಣವಿಲ್ಲ. ಮಿತಿಮಿಕ್ಕು ಬೆಳೆದ ಈಗಿನ ನಮ್ಮ ನಗರಗಳು ಹೇಯವಾದ ಅನೇಕ ದುಷ್ಟರೋಗಗಳನ್ನು ಹುಟ್ಟಿಸಿವೆ. ಈ ಇಂಥ ಮಿತಿಮಿಕ್ಕ ಬೆಳವಣಿಗೆಯನ್ನು ಪ್ರಾಯಶಃ, ನಾವು ತಡೆಯಬೇಕಾಗುತ್ತದೆ ಮತ್ತು ಅದೇ ಕಾಲಕ್ಕೆ, ಹಳ್ಳಿಗಳು ನಗರಸಂಸ್ಕೃತಿಗೆ ತಮ್ಮನ್ನು ಸಮೀಪಗೊಳಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕಾಗುತ್ತದೆ.

'ಹಿಂದ್ ಸ್ವರಾಜ್' ಪುಸ್ತಕವನ್ನೋದಿ ಈಗ ಎಷ್ಟೋ ವರ್ಷಗಳಾಗಿವೆ; ಅದರ ಮಸುಕು ಚಿತ್ರ ಮಾತ್ರವೇ ಮನಸ್ಸಿನಲ್ಲುಳಿದಿದೆ. ಆದರೆ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಹಿಂದೆ ಓದಿದಾಗಲೇ ನನಗೆ ಅದು ಸಂಪೂರ್ಣ ಅವಾಸ್ತವವೆಂದು ಕಂಡಿತ್ತು. ಮುಂದಿನ ನಿಮ್ಮ ಬರವಣಿಗೆಗಳಲ್ಲಿ ಮತ್ತು ಭಾಷಣಗಳಲ್ಲಿ ಆ ನಿಮ್ಮ ಹಳೆಯ ನಿಲುವಿನಿಂದ ಮುಂದಕ್ಕೆ ಬಂದ ಹಾಗೂ ಆಧುನಿಕ ಮನೋಭಾವಗಳನ್ನು ಮೆಚ್ಚುವ ಅನೇಕ ಅಂಶಗಳು ನನಗೆ ಕಂಡಿವೆ. ಆದ್ದರಿಂದಲೇ, ಆ ಹಳೆಯ ಚಿತ್ರಗಳು ಈಗಲೂ ನಿಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಹಾಗೇ ಉಳಿದಿವೆ ಎಂದು ತಿಳಿದಾಗ ನನಗೆ ಆಶ್ಚರ್ಯವಾಯಿತು. ನಿಮಗೇ ತಿಳಿದಿರುವ ಹಾಗೆ, ಕಾಂಗ್ರೆಸ್ ಆ ಚಿತ್ರವನ್ನು ಯಾವತ್ತೂ ಪರಿಗಣಿಸಿ ನೋಡಿಲ್ಲ, ಅಂಗೀಕರಿಸಿದ್ದಂತೂ ಇಲ್ಲ. ಅದರಲ್ಲಿನ ಕೆಲವು ಸಣ್ಣಪುಟ್ಟ ಅಂಶಗಳನ್ನು ಬಿಟ್ಟು, ಇಡಿಯಾಗಿ ಅದನ್ನು ಒಪ್ಪಿಕೊಳ್ಳುವಂತೆ ಸ್ವತಃ ನೀವೂ ಯಾವತ್ತೂ ಕೇಳಿಲ್ಲ. ಜೀವನದ ವಿವಿಧ ತತ್ವಸಿದ್ಧಾಂತಗಳನ್ನೊಳಗೊಳಿಸಿಕೊಳ್ಳುವ ಈ ಮೌಲಿಕ ಪ್ರಶ್ನೆಗಳನ್ನು ಪರಿಗಣಿಸಲು ಕಾಂಗ್ರೆಸ್ ತನ್ನನ್ನು ತೊಡಗಿಸಿಕೊಳ್ಳಬೇಕೆ, ಅದು ಎಷ್ಟುಮಟ್ಟಿಗೆ ಅಪೇಕ್ಷಣೀಯ ಎನ್ನುವುದನ್ನು ನೀವೇ ತೀರ್ಮಾನಿಸಬೇಕು. ಜನರ ಮನಸ್ಸಿನಲ್ಲಿ ಮಹಾ ಗೊಂದಲಗಳನ್ನು ಹುಟ್ಟಿಸುವಂಥ ಹಾಗೂ ಪರಿಣಾಮದಲ್ಲಿ ಪ್ರಸ್ತುತ ಎಲ್ಲವನ್ನೂ ನಿಷ್ಕ್ರಿಯಗೊಳಿಸಿಬಿಡುವಂಥ, ಇಂಥ ವಿಷಯಗಳ ವಾದವಿವಾದಗಳಲ್ಲಿ ಕಾಂಗ್ರೆಸ್‌ನಂಥ ಒಂದು ಸಂಘಟನೆಯು ನಷ್ಟವಾಗಿಬಿಡಬಾರದು ಎಂದೇ ನಾನು ಯೋಚಿಸಬೇಕಾಗುತ್ತದೆ. ಅಲ್ಲದೆ ಇದು, ಕಾಂಗ್ರೆಸ್ ಮತ್ತು ದೇಶದಲ್ಲಿರುವ ಇನ್ನಿತರರ ನಡುವೆ ಒಂದು ತಡೆಗೋಡೆಯಾಗಿ ಕೂಡಾ ಪರಿಣಮಿಸಬಹುದು. ಈ ಮತ್ತು ಇನ್ನಿತರ ಪ್ರಶ್ನೆಗಳನ್ನು ಅಂತಿಮವಾಗಿ, ಸ್ವತಂತ್ರ ಭಾರತದ ಪ್ರತಿನಿಧಿಗಳು ತೀರ್ಮಾನಿಸಬೇಕು. ಈ ಅನೇಕ ಪ್ರಶ್ನೆಗಳು – ಕಳೆದ ಒಂದು ತಲೆಮಾರಿನ ಅವಧಿಯಲ್ಲಿ ಜಗತ್ತಿನ ತುಂಬಾ ನಡೆದುಹೋಗಿರುವ ವ್ಯಾಪಕವಾದ ಬದಲಾವಣೆಗಳನ್ನು ಕಡೆಗಣಿಸಿ – ಹಳೆಯಕಾಲದ ನೆಲೆಯಲ್ಲೇ ಚಿಂತನೆಗೊಂಡಿವೆ ಮತ್ತು ಚರ್ಚಿತವಾಗಿವೆ ಎನ್ನುವ ಅನ್ನಿಸಿಕೆ ನನಗಿದೆ.

'ಹಿಂದ್ ಸ್ವರಾಜ್' ಬರೆದು ಈಗ ಮೂವತ್ತೆಂಟು ವರ್ಷಗಳು ಕಳೆದಿವೆ. ಆವತ್ತಿನಿಂದ ಮುಂದೆ ಜಗತ್ತು ಸಂಪೂರ್ಣವಾಗಿ ಬದಲಾಗಿಹೋಗಿದೆ; ಅದು ತಪ್ಪುದಾರಿಯನ್ನೇ ಹಿಡಿದಿರಲೂ ಬಹುದು. ಹೇಗೇ ಇದ್ದರೂ ಈಗ ಮೇಲಿನ ಪ್ರಶ್ನೆಗಳನ್ನು ಪರಿಗಣಿಸುವಾಗ, ವರ್ತಮಾನದ್ದೇ ವಾಸ್ತವಗಳು, ಚಾಲಕಶಕ್ತಿಗಳು ಮತ್ತು ಇವತ್ತು ನಮ್ಮ ಕಣ್ಣೆದುರಿರುವ ಮಾನವದ್ರವ್ಯ ಮುಂತಾದವನ್ನು ನಾವು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ; ಅದಲ್ಲದಿದ್ದರೆ ನಾವು ವಾಸ್ತವದಿಂದ ವಿಚ್ಛೇದಗೊಳ್ಳುತ್ತೇವೆ. ಜಗತ್ತು ಅಥವಾ ಅದರ ಬಹುಭಾಗವು ಆತ್ಮಹತ್ಯೆಯಲ್ಲಿ ಉದ್ಯುಕ್ತವಾಗಿರುವಂತೆ ತೋರುತ್ತದೆ ಎಂದು ನೀವು ಹೇಳುವುದು ಸರಿ. ಈಗ ಬೆಳೆದಿರುವ ನಾಗರಿಕತೆಯಲ್ಲಿ ಯಾವುದೋ

ದುರ್ಬೀಜವು ಸೇರಿಕೊಂಡಿರುವುದರ ಅನಿವಾರ್ಯ ಪರಿಣಾಮವೇ ಇದ್ದೀತು ಇದು. ಅದು ಹಾಗೇ ಸರಿ ಅಂತ ಯೋಚಿಸುತ್ತೇನೆ. ಈ ದುರ್ಬೀಜ ಕೆಡುಕನ್ನು ನಿವಾರಿಸುವುದು ಹೇಗೆ ಮತ್ತು ಈಗಲೂ ಹಳೆಯ ರೀತಿಯ ಒಳ್ಳೆಯದನ್ನು ಉಳಿಸಿಕೊಳ್ಳುವುದು ಹೇಗೆ ಎನ್ನುವುದು ನಮ್ಮ ಸಮಸ್ಯೆ. ಇನ್ನು ಇವತ್ತಿನದರಲ್ಲೂ ಒಳ್ಳೆಯದಿದೆ ಎನ್ನುವುದು ಸ್ಪಷ್ಟ.

ತತ್ಕಾಲದಲ್ಲಿ ಚೆದುರಿಕೊಂಡು ಬಂದಿರುವ ಈ ಕೆಲವು ಆಲೋಚನೆಗಳನ್ನು ತ್ವರೆಯಲ್ಲಿ ಬರೆಯುತ್ತಿದ್ದೇನೆ. ಎತ್ತಲಾದ ಪ್ರಶ್ನೆಗಳ ಅತಿಗಂಭೀರವಾದ ಅರ್ಥಸಾಧ್ಯತೆಗಳಿಗೆ ಈ ನನ್ನ ಮಾತುಗಳು ನ್ಯಾಯಮಾಡಿಲ್ಲ ಎಂಬ ಹೆದರಿಕೆಯಿದೆ. ಈ ಅಸ್ತವ್ಯಸ್ತ ಮಂಡನೆಗಾಗಿ ನೀವು ನನ್ನನ್ನು ಕ್ಷಮಿಸುತ್ತೀರಿ ಎಂದು ಆಶಿಸುತ್ತೇನೆ. ಮುಂದೆ, ಈ ವಿಷಯ ಕುರಿತು ಹೆಚ್ಚು ಸ್ಪಷ್ಟವಾಗಿ ಬರೆಯಲು ಪ್ರಯತ್ನಿಸುತ್ತೇನೆ.

ಹಿಂದುಸ್ತಾನಿ ಪ್ರಚಾರ ಸಭಾ ಮತ್ತು ಕಸ್ತೂರಿ ಬಾ ನಿಧಿ – ಅವೆರಡರ ಬಗ್ಗೆಯೂ ನನಗೆ ಸಹಾನುಭೂತಿಯಿದೆ ಎನ್ನುವುದು ಸ್ಪಷ್ಟವೇ; ಅವು ಒಳ್ಳೆಯ ಕೆಲಸ ಮಾಡುತ್ತಿವೆ ಎಂದು ತಿಳಿದಿದ್ದೇನೆ. ಆದರೆ, ಅವುಗಳ ಕೆಲಸದ ಕ್ರಮದ ಬಗ್ಗೆ ನಾನು ನಿಶ್ಚಿತವಾಗಿ ಹೇಳಲಾರೆ; ಅದು ಎಲ್ಲ ಕಾಲದಲ್ಲೂ ನನಗೆ ಇಷ್ಟವಾಗಿದೆ ಎನ್ನಲಾರೆ. ಅವುಗಳ ಬಗ್ಗೆ ನಿಶ್ಚಿತವಾಗಿ ಹೇಳಲು ಬೇಕಾದಷ್ಟು ವಿವರಗಳು ನನಗೆ ತಿಳಿದಿಲ್ಲ. ಸಮಯವಿಲ್ಲದ ಕಾರಣ, ಮಾಡಲು ಸಾಧ್ಯವಾಗದ್ದನ್ನು ಹೊತ್ತುಕೊಂಡು ನನ್ನ ಹೊಣೆಗಾರಿಕೆಯ ಭಾರವನ್ನು ಇನ್ನೂ ಹೆಚ್ಚಿಸಿಕೊಳ್ಳುವುದು ಬೇಡವೆಂದು ನನಗನ್ನಿಸಿದೆ. ಈ ಮುಂದಿನ ಕೆಲವು ತಿಂಗಳುಗಳು, ಅಥವಾ ಅದಕ್ಕೂ ಹೆಚ್ಚಿನ ಅವಧಿಯಲ್ಲಿ, ನನಗೂ ಇತರರಿಗೂ ಕೆಲಸದ ಜ್ವರವೇ ಹತ್ತಿಕೊಳ್ಳುವಂತೆ ಕಾಣುತ್ತದೆ. ಈ ಕಾರಣ, ಕೇವಲ ಚಂದಕ್ಕಾಗಿ ಹೊಣೆಯುಳ್ಳ ಸಮಿತಿಯೊಂದರಲ್ಲಿ ಸೇರಿಕೊಳ್ಳುವುದು ಅಪೇಕ್ಷಣೀಯವಲ್ಲವೆಂದೇ ತೋರುತ್ತದೆ.

ಶರತ್‌ಬೋಸ್ ಬಗ್ಗೆ – ಅವರೇಕೆ ನನ್ನ ಮೇಲೆ ಅಷ್ಟು ಕೋಪಗೊಂಡಿದ್ದಾರೋ ನನಗೆ ಕಾಣಿಸದು; ವಿದೇಶ ಸಂಬಂಧ ಕುರಿತು ನನ್ನ ಸಾಮಾನ್ಯ ಧೋರಣೆಗಳ ಬಗ್ಗೆ ಅವರಿಗೆ ಹಿಂದೆ ಅಸಮಾಧಾನವಿದ್ದದ್ದೇ ಇದಕ್ಕೆ ಕಾರಣವಿರಲಿಕ್ಕೂ ಸಾಕು. ನನ್ನದು ಸರಿಯೋ ತಪ್ಪೋ ಅದೇನೇ ಇರಲಿ ಶರತ್, ಬಾಲಿಶವಾಗಿ ಹಾಗೂ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ಸ್ಪೆಯಿನ್, ಜೆಕೊಸ್ಲೊವೆಕಿಯ, ಮ್ಯೂನಿಚ್ ಮತ್ತು ಚೀನಾಗಳನ್ನು ಕುರಿತು ಕಾಂಗ್ರೆಸ್ ರೂಪಿಸಿಕೊಂಡ ಧೋರಣೆಗಳನ್ನು ಆ ಕಾಲದಲ್ಲಿ ಸುಭಾಸ್ ಒಪ್ಪಿಕೊಂಡಿರಲಿಲ್ಲ ಎನ್ನುವುದು ಪ್ರಾಯಶಃ, ನಿಮಗೆ ನೆನಪಿರಬಹುದು. ಇದು ಬಹುಶಃ, ಆ ಹಳೆಯ ಭಿನ್ನಾಭಿಪ್ರಾಯದ ಪ್ರತಿಫಲನವಿರಬಹುದು, ಅದಲ್ಲದೆ ಇನ್ನೇನು ನಡೆದದ್ದೂ ನನಗೆ ತಿಳಿಯದು.

ನವೆಂಬರ್ ಮೊದಲಲ್ಲಿ ನೀವು ಬಂಗಾಲಕ್ಕೆ ಹೋಗುವುದು ತಿಳಿಯಿತು. ಅದೇ ಹೊತ್ತಿಗೆ ಪ್ರಾಯಶಃ, ನಾನೂ ಮೂರುನಾಲ್ಕು ದಿನ ಕಲ್ಕತ್ತಕ್ಕೆ ಭೇಟಿಕೊಡಬಹುದು.

ಹೊಸದಾಗಿ ರೂಪಗೊಂಡ ಇಂಡೋನೇಸಿಯನ್ ರಿಪಬ್ಲಿಕ್‌ನ ಅಧ್ಯಕ್ಷರು, ಜಾವಾಕ್ಕೆ ಬರುವಂತೆ ನನಗೂ ಇತರರಿಗೂ ಆಹ್ವಾನ ಕಳಿಸಿರುವುದನ್ನು ನೀವು ಪತ್ರಿಕೆಗಳಲ್ಲಿ ನೋಡಿರಬಹುದು. ಇದೊಂದು ವಿಶೇಷ ಸಂದರ್ಭವೆಂಬುದನ್ನು ಮನಗಂಡು ತತ್‌ಕ್ಷಣವೇ ಒಪ್ಪಿಕೊಳ್ಳಲು ಅಂದರೆ, ಪ್ರಯಾಣದ ಅನುಕೂಲಗಳು

ದೊರೆಯುವುದನ್ನವಲಂಬಿಸಿ ಒಪ್ಪಿಕೊಳ್ಳಲು ನಿರ್ಧರಿಸಿದೆ. ಪ್ರಯಾಣದ ಅನುಕೂಲಗಳು ಸಿಗುವುದು ದೊಡ್ಡ ಸಂದೇಹವೇ ಆಗಿರುವುದರಿಂದ ನಾನು ಹೋಗದಿರುವುದೇ ಹೆಚ್ಚು ಸಾಧ್ಯ. ವಾಯುಪ್ರಯಾಣದಲ್ಲಿ ಜಾವಾ, ಇಂಡಿಯಾದಿಂದ ಎರಡು ದಿನಗಳ ಅಥವಾ ಕಲ್ಕತ್ತದಿಂದ ಒಂದೇ ದಿನದ ಹಾದಿ. ಈ ಇಂಡೋನೇಸ್ಯನ್ ರಿಪಬ್ಲಿಕನ ಉಪಾಧ್ಯಕ್ಷ, ಮೊಹಮ್ಮದ್ ಹಟ್ಟಾ ನನ್ನ ಬಲು ಹಳೆಯ ಸ್ನೇಹಿತರು. ಜಾವಾದ ಜನಸಮುದಾಯವು ಬಹುಮಟ್ಟಿಗೆ ಮುಸ್ಲಿಂ ಎಂಬುದು ನಿಮಗೆ ಗೊತ್ತಿರಬೇಕು.

ನೀವು ಚೆನ್ನಾಗಿದ್ದೀರಿ ಎಂದು, ಇನ್‌ಫ್ಲುಯೆಂಜಾ ಹೊಡೆತದಿಂದ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದೀರೆಂದು ನಂಬುತ್ತೇನೆ.

ನಿಮ್ಮ ಪ್ರೀತಿಯ,

ಜವಹರಲಾಲ್

(ಸಾಭಾರ : ಸ್ವರಾಜ್ಯದ ಹಾದಿ ಹೆಜ್ಜೆಗಳು, ಆಯ್ದ ಗಾಂಧಿ ಬರಹಗಳ ಅನುವಾದ ಸಂಗ್ರಹ, ಅನುವಾದ : ಕೆ.ವಿ.ಸುಬ್ಬಣ್ಣ)

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಸಂಸ್ಕಾರಗಳು ಹಾಗೂ ಮಾನವೀಯ ಮೌಲ್ಯಗಳು**

ಲೇಖಕರು : ಆರ್.ಕೆ.ಶ್ರೀಕಂಠ ಕುಮಾರಸ್ವಾಮಿ

ಪ್ರಕಾಶಕರು : ಆಪಸ್ತಂಬ ಪ್ರಕಾಶನ
೧೪೨/೮, ನಿರ್ವಾಣ ಅಪಾರ್ಟ್‌ಮೆಂಟ್ಸ್,
ಐ.ಟಿ.ಐ. ಲೇಔಟ್, ಬಿ.ಎಸ್.ಕೆ. ೩ನೇ ಹಂತ
ಬೆಂಗಳೂರು - ೮೫ : ದೂರವಾಣಿ : ೨೬೭೯೩೨೩೦
ಬೆಲೆ : ೨೫೦ ರೂ ; ಪುಟಗಳು : ೩೫೧+೧=೩೫೨

ಮಾನವನೆಂಬ ಪ್ರತಿಯೊಂದು ಪ್ರಾಣಿಯು ಸಂಸ್ಕಾರಗಳನ್ನು ಹೊಂದಬೇಕಾದುದು ಅಗತ್ಯ. ಹಾಗಿಲ್ಲವಾದಲ್ಲಿ ಅವನು ಬೇರೆ ಜೀವಿಗಳಿಂದ ಭಿನ್ನವಾಗಲಾರ. ಸಂಸ್ಕಾರಗಳ ವಿಶೇಷತೆಯೇನೆಂದರೆ ಮಾನವೀಯ ಮೌಲ್ಯಗಳನ್ನು ಹೊಂದಿರುತ್ತವೆ ಎಂಬುದು. ಅರ್ಥವಿಹೀನ ಸಂಸ್ಕಾರಗಳ ಆಚರಣೆ ಭಯಾನಕವಾದದುದು. ಆದರೆ ಅರ್ಥವಂತಿಕೆಯ ಸಂಸ್ಕಾರಗಳು ಆತ್ಮೋನ್ನತಿಯವು. ವಿಶೇಷ ಶಕ್ತಿಯ ಇಂಥ ಸಂಸ್ಕಾರಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಉಣಬಡಿಸುತ್ತದೆ ಈ ಗ್ರಂಥ. ಗ್ರಂಥದ ಲೇಖಕರು ಸ್ವತಃ ವಿದ್ವಾಂಸರು. ಸಂಸ್ಕಾರದ ವಿಡಂಬನೆಯನ್ನು ಖಂಡಿಸುವವರು. ತಂತ್ರಜ್ಞಾನಿಯಾಗಿ ಸಂಸ್ಕಾರಗಳ ಉಪಯುಕ್ತತೆಯ ಬಗ್ಗೆ ಮಾರು ಹೋಗಿ ಈ ಗ್ರಂಥ ರಚಿಸಿದ್ದಾರೆ.

ಜನಪದ ವ್ಯಕ್ತಿ

ಓಟದಲ್ಲಿ, ಕುಸ್ತಿಯಲ್ಲಿ, ವಾಲಿಬಾಲ್ ಮುಂತಾದ ಕ್ರೀಡಾ ಚಟುವಟಿಕೆಗಳಲ್ಲಿ ಆಸಕ್ತಿಯಿರುವ ಟಿ.ಆರ್.ಕೃಷ್ಣಪ್ಪ ಸರ್ಕಾರದಲ್ಲಿಯ ಭ್ರಷ್ಟಾಚಾರ ಮತ್ತು ನಿಧಾನಗತಿಯನ್ನು ಸೋಲಿಸಿದ ಕ್ರೀಡಾಪಟುವೂ ಆಗಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ಭ್ರಷ್ಟಾಚಾರದ ವಿರುದ್ಧ ಸೋಲುವವರೆ ಹೆಚ್ಚು. ಮಾಹಿತಿ ಹಕ್ಕಿನ ಕಾನೂನು ಬಂದಿದ್ದರೂ ಸಹ ಯಶಸ್ಸು ಸಿಗುವುದು ಕಷ್ಟ. ಇಷ್ಟೆಲ್ಲ ಕಷ್ಟಗಳ ಮಧ್ಯೆ ಸಾರ್ವಜನಿಕ ವ್ಯವಸ್ಥೆಯಲ್ಲಿ ಸುಧಾರಣೆ ತರುವಂಥ ಕೆಲಸ ಮಾಡಿ ರಾಷ್ಟ್ರೀಯ ಪುರಸ್ಕಾರ ಪಡೆದ ವ್ಯಕ್ತಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಟಿ.ಆರ್.ಕೃಷ್ಣಪ್ಪ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಮಾಡುವಾಗ ಆದ ಭ್ರಷ್ಟಾಚಾರ ಮನೆಯಲ್ಲಿ ಶೌಚಾಲಯ ಹೊಂದದೆ ಇರುವವರು ಪಂಚಾಯತಿ ಸದಸ್ಯರಾಗಲು ಅನರ್ಹವೆಂಬ ನಿಯಮವಿದ್ದರೂ ಅದನ್ನು ಮೀರಿ ಚುನಾವಣೆಗೆ ನಿಂತ ಸದಸ್ಯರ ವಿರುದ್ಧ ಹೋರಾಟ ನಡೆಸಿದರು. ಸಾಗುವಳಿ ಚೀಟಿ ದತ್ತವಾಗಿದ್ದರೂ ಮಂಜೂರಾದ ಭೂಮಿಯ ಮೇಲಿನ ಹಕ್ಕುಪತ್ರ ಸಿಗದೆ ಇದ್ದಾಗ ಬಡರೈತರ ಪರವಾಗಿ ಹೋರಾಟಮಾಡಿ ಹಕ್ಕುಪತ್ರ ದೊರಕಿಸಿಕೊಟ್ಟರು. ದಲಿತ ಹಿರಣ್ಣನೆಂಬುವವರ ಜಮೀನಿನ ಮಧ್ಯೆ ಸಮಾಜದಲ್ಲಿಯ ಪ್ರಭಾವಿಗಳ ಕಾರಣದಿಂದ ಜಿಲ್ಲಾಪಂಚಾಯತಿ ರಸ್ತೆ ನಿರ್ಮಿಸಲು ಮುಂದಾದಾಗ ಕೃಷ್ಣಪ್ಪನವರು ಹೋರಾಡಿ ಹಿರಣ್ಣನವರಿಗೆ ಆ ಕಿರುಕುಳ ತಪ್ಪಿಸಿದರು. ಅನೇಕ ಸಲ ಸಾರ್ವಜನಿಕ ಬೇಡಿಕೆಗಳೊಂದಿಗೆ ೩೨೫ ಕಿ.ಮಿ. ದೂರದ ಬೆಂಗಳೂರಿಗೆ ಸೈಕಲ್ ಮೇಲೆ ಮತ್ತು ಕಾಲ್ನಡಿಗೆಯಲ್ಲಿ ಹೋಗಿ ಸರ್ಕಾರಕ್ಕೆ ಮನವಿ ಸಲ್ಲಿಸಿ ತಮ್ಮ ಗ್ರಾಮಕ್ಕೆ ಪದವಿ ಕಾಲೇಜ್, ಹೆರಿಗೆ ಆಸ್ಪತ್ರೆ, ವಿದ್ಯುತ್‌ಮಂಡಳಿಯ ಸೆಕ್ಷನ್ ಕಛೇರಿ ಮತ್ತು ಪೋಲೀಸರಿಗೆ ವಸತಿಗೃಹ ಸಿಗುವಂತೆ ಮಾಡಿದ್ದಾರೆ. ಇವರ ನ್ಯಾಯವಾದ ಹೋರಾಟವನ್ನು ಗ್ರಾಮದ ಪಂಚಾಯತಿ ಮತ್ತು ಪಟ್ಟಭದ್ರ ಹಿತಾಸಕ್ತರು ಕಿರುಕುಳವೆಂದು ಭಾವಿಸಿದರು. ಆಗಾಗ್ಗೆ ಅನ್ಯಾಯದ ವಿರುದ್ಧ ಸಿಡಿದೇಳುವ ಪ್ರತಿಭಟನೆ ಮಾಡುವ ಕೃಷ್ಣಪ್ಪನವರಿಗೆ ಪೋಲಿಸ್ ಇಲಾಖೆ ಗೂಂಡಾ ಎಂದು ಹಣೆಪಟ್ಟಿ ಕಟ್ಟಿ ರೌಡಿ ರಿಜಿಸ್ಟರ್‌ನಲ್ಲಿ ಹೆಸರನ್ನು ನಮೂದಿಸಿದೆ. ಈಗ್ಗೆ ೪೦ ವರ್ಷಗಳ ಹಿಂದೆ ತಾವೇ ಸ್ವತಃ ಸರಳ ವಿವಾಹ ಮಾಡಿಕೊಂಡರು. ತಮ್ಮ ಇಬ್ಬರು ಹೆಣ್ಣು ಮಕ್ಕಳಿಗೆ ಸರಳ ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿದ್ದಾರೆ. ತುರ್ತುಪರಿಸ್ಥಿತಿ ಕಾಲದಲ್ಲಿ ಹೋರಾಟ ನಡೆಸಿ ಜೈಲುವಾಸ ಅನುಭವಿಸಿದರು. ಅವರು ಒಮ್ಮೆ ಗ್ರಾಮ ಪಂಚಾಯತಿಗೆ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷರೂ ಆದರು. ಆದರೆ ಅವರು ತಮ್ಮ ಹೋರಾಟದ ಕಾಯಕವನ್ನು ಬಿಡಲಿಲ್ಲ. ಇದರ ಪರಿಣಾಮವಾಗಿ ಅವರನ್ನು ಪಂಚಾಯತಿಯಿಂದ ಗಡಿಪಾರು ಮಾಡಲಾಯಿತು. ಈ ಕ್ರಮ ಕಾನೂನು ಬಾಹಿರವಾಗಿತ್ತು. ಆದ್ದರಿಂದ ಪ್ರಗತಿಪರ ಸಂಘಟನೆಗಳು ಇವರ ಪರವಾಗಿ ನಿಂತು ಹೋರಾಟಮಾಡಿದವು. ಇವರ ವಿರುದ್ಧ ಆಗಿದ್ದ ಅನ್ಯಾಯವನ್ನು ಕೆಲವು ಪತ್ರಿಕೆಗಳು ಬೆಳಕಿಗೆ ತಂದವು. ಆ ವೇಳೆಗೆ ಷಣ್ಮುಗಂ ಟ್ರಸ್ಟ್ ಎಂಬ ಸಂಸ್ಥೆಯು ಕೃಷ್ಣಪ್ಪನವರ ಹೋರಾಟದ ಸಮಗ್ರ ಮಾಹಿತಿ ಪಡೆದು ಅವರನ್ನು ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಿತು. ಈ ಪುರಸ್ಕಾರ ಪಡೆದವರಲ್ಲಿ ಟಿ.ಆರ್. ಕೃಷ್ಣಪ್ಪನವರು ಒಬ್ಬರು. ಇವರು ಗಾಂಧೀ ತೋರಿಸಿಕೊಟ್ಟ ಸತ್ಯಾಗ್ರಹದ ಮಾರ್ಗವನ್ನು ಪುನಃ ಬೆಳಕಿಗೆ ತಂದು ಸಮಾಜಕ್ಕೆ ಮಹದುಪಕಾರ ಮಾಡಿದ್ದಾರೆ. ಕೃಷ್ಣಪ್ಪನವರಂತಹ ಸಂತತಿ ಇಂದಿನ ಭ್ರಷ್ಟಯುಗದಲ್ಲಿ ಬೆಳೆಯಲೆಂಬುದೆ ಎಲ್ಲರ ಹಾರೈಕೆಯಾಗಬೇಕು.

– ಸಾಭಾರ : ಸರ್ಜಾಶಂಕರ್ ಹರಳಿಮಠ

* * *

ಭರತವರ್ಷದ ನಿಜಸ್ವರೂಪ

– ರವೀಂದ್ರನಾಥ ಠಾಕೂರ್

ಶ್ರೇಷ್ಠರಿರಲಿ ಇಲ್ಲವೆ ಕಿರಿಯರಿರಲಿ, ಪುರುಷ ಅಥವಾ ಮಹಿಳೆಯರೇ ಆಗಿರಲಿ, ಪ್ರತಿಯೊಬ್ಬರಿಗೂ ಭರತವರ್ಷವು ಘನತೆಯನ್ನು ನೀಡಿದೆ. ಮತ್ತು ಈ ಘನತೆಯನ್ನು ಹಮ್ಮಿನ ಮಹತ್ವಾಕಾಂಕ್ಷೆಯ ಮೂಲಕ ಹೊಂದಬಹುದಾದಂತಹುದು ಎನ್ನುವಂತೆ ಬಿಂಬಿಸಲಾಗಿಲ್ಲ. ಪರಕೀಯರು ಇದನ್ನು ಕಾಣಲು ಅಶಕ್ತರು. ಒಂದು ವಂಶಪಾರಂಪರ್ಯವಾದ ಕಾಯಕದ ನಡುವೆ ಜನ್ಮ ಪಡೆದಂತಹ ಒಬ್ಬ ವ್ಯಕ್ತಿಯು, ಯಾವ ಕಾಯಕವು ಆತನಿಗೆ ಅಲ್ಲಿ ಅತ್ಯಂತ ಸುಲಭವಾಗಿ ಲಭ್ಯವಾಗುವುದೋ ಅದನ್ನು, ಆ ಕಾಯಕವನ್ನು ಅನುಸರಿಸುವುದೇ ಆತನಿಗೆ ಗೌರವಾರ್ಹವಾದೀತು. ವಾಸ್ತವವಾಗಿ, ಅದರಿಂದ ವಿಪಥಗೊಳ್ಳುವುದು ಅನುಚಿತವೇ ಆದೀತು. ಘನತೆಯ ಈ ಪ್ರಜ್ಞೆಯೇ, ಮಾನವೀಯ ಗುಣಧರ್ಮಗಳೆಡೆಗೆ ಸ್ಥಿರವಾಗಿ ಮುನ್ನಡೆಯಲು ಏಕೈಕ ಸಾಧನವಾಗಿದೆ.

ಕೇವಲ ಕೆಲವರು ಮಾತ್ರವೇ ಉಚ್ಚ ದರ್ಜೆಯ ಅದೃಷ್ಟವನ್ನು ಹೊಂದುವರು. ಮಿಕ್ಕವರು ಸೌಕರ್ಯಯುತರ ಸೌಭಾಗ್ಯದೊಂದಿಗೆ ತಮ್ಮ ವಿಧಿಯನ್ನು ಹೋಲಿಸುತ್ತಾ, ಅಪಮಾನದ ಭಾವನೆಯಿಂದ ವ್ಯಥೆಗೆ ಒಳಗಾದಲ್ಲಿ, ಅವರ ಈ ಸ್ವಪ್ರತಿಷ್ಠೆಯ ಅಭಾವವು ಅವರನ್ನು ನಿಜಕ್ಕೂ ಹೀನಗೊಳಿಸೀತು. ಈ ವಿಧವಾಗಿ ಯೊರೋಪಿನ ಪ್ರತಿಶತ ತೊಂಭತ್ತೊಂಭತ್ತು ಜನರು ಅಪಹೃತ ಭಾವ, ಈರ್ಷ್ಯೆ, ನಿರರ್ಥಕತೆಗಳ ಪ್ರಜ್ಞೆಯಿಂದ ವೇದನೆಗೊಳಗಾಗಿರುವರು; ಸದಾಕಾಲ ಕ್ಷೋಭೆಗೊಂಡಿರುವರು. ಯೂರೋಪಿನ ಸಂದರ್ಶಕರು, ತಮ್ಮ ಸಮಾಜದಲ್ಲಿನ ಬಡ ಹಾಗೂ ಕೆಳವರ್ಗಗಳನ್ನು ತಾವು ಅರ್ಥೈಸುವಂತೆಯೇ, ಅದೇ ದೃಷ್ಟಿಕೋನದಲ್ಲಿಯೇ, ನಮ್ಮ ಸಮಾಜದಲ್ಲಿನ ಬಡ ಹಾಗೂ ಕೆಳವರ್ಗಗಳನ್ನು ಕಾಣುತ್ತಾರೆ, ಮತ್ತು ತಮ್ಮ ಜನರಲ್ಲಿರುವಂತಹ ಅತೀವ ಕಷ್ಟ ಹಾಗೂ ಅಪಮಾನದ ಹೀನ ಭಾವಗಳು ಇಲ್ಲಿ ನಮ್ಮಲ್ಲಿನ ಜನರಲ್ಲೂ ಇದ್ದಿರಬೇಕೆಂದು ಭಾವಿಸುತ್ತಾರೆ. ಆದರೆ, ವಾಸ್ತವ ಸಂಗತಿಯೆಂದರೆ, ಅಂತಹ ಭಾವಗಳು ಇಲ್ಲಿ ಇಲ್ಲವೇ ಇಲ್ಲ. ಭರತವರ್ಷದಲ್ಲಿ, ಸಾಮಾಜಿಕ ಹಾಗೂ ಔದ್ಯೋಗಿಕ ವಿಭಾಗೀಕರಣಗಳು ಸ್ಪಷ್ಟವಾಗಿ ವಿಧಿಸಿಲ್ಪಟ್ಟಿರುವುದರ ಕಾರಣದಿಂದಾಗಿ, 'ಉಚ್ಚ ಕ್ರಮಾಂಕದಲ್ಲಿರುವವರು ತಮ್ಮ ಅಸ್ತಿತ್ವವನ್ನು ಕಾಯ್ದಿಟ್ಟುಕೊಳ್ಳುವುದಕ್ಕಾಗಿ 'ಕೆಳ' ಅಂತಸ್ತಿನ ಜನರನ್ನು ಅಪಮಾನಕರವಾಗಿ ಹೊರದೂಡುವುದಿಲ್ಲ. ಓರ್ವ ಬ್ರಾಹ್ಮಣ ಬಾಲಕನೂ 'ಬಗ್ದೀದಾದಾ'ನನ್ನು ಹೊಂದಿಯೇಹೊಂದಿರುತ್ತನೆ. 'ಕೆಳ' ಜಾತಿಯ ಹಿರಿಯರು ಬ್ರಾಹ್ಮಣ ಬಾಲಕರ ಗೌರವಕ್ಕೆ ಪಾತ್ರರಾಗಿಯೇ ಇರುತ್ತಾರೆ. ಇಲ್ಲಿ, ಸಮಾಜದಲ್ಲಿನ ಮೇರೆಗಳು ವಿವಾದರಹಿತವಾಗಿ ಪಾಲಿಸಲ್ಪಡುವುದರಿಂದ, ಪರಸ್ಪರ ಸಂವಹನ ಹಾಗೂ ಮನುಷ್ಯ–ಮನುಷ್ಯರ ನಡುವಿನ ಮಾನವೀಯ ಸಂಬಂಧಗಳು ಯಾವುದೇ

ಅಡ್ಡಿ–ಆತಂತಕಗಳಿಲ್ಲದೆ ಸಾಗಬಹುದಾಗಿದೆ. ಉಚ್ಚತೆಯೆಡೆಗಿನ ಆತ್ಮೀಯತೆಯ ಗುರುತ್ವವು ಕೆಳಗಿನವರನ್ನು ಹೊಸಕಿ ಪುಡಿಗೈಯುವುದಿಲ್ಲ. ಒಂದೊಮ್ಮೆ ಈ ಜಗದಲ್ಲಿ ಉಚ್ಚ–ಕನಿಷ್ಠಗಳ ನಡುವಿನ ಅಸಮಾನತೆಯು ಅನಿವಾರ್ಯವೇ ಎಂದಾಗ, ಎಲ್ಲೆಡೆಯೂ ಉಚ್ಚವರ್ಗಕ್ಕಿಂತ ಕೆಳವರ್ಗದಲ್ಲಿರುವವರೇ ಅಧಿಕವೆಂದಾದಲ್ಲಿ, ಆಗ ಆ ವಿಪುಲ ಬಹುಸಂಖ್ಯಾತರನ್ನು ಅನಾದರದ ಅಪಮಾನದಿಂದ ಕಾಪಾಡಲು, ಭರತವರ್ಷವು ರೂಪಿಸಿರುವ ಸಾಧನವನ್ನೇ ಮಿಕ್ಕೆಲವುಗಳಿಂದ ಶ್ರೇಷ್ಠವಾದುದೆಂದು ಅಂಗೀಕರಿಸಲೇ ಬೇಕಾಗುತ್ತದೆ.

ಯೂರೋಪಿನಲ್ಲಿ ಅನಾದರದ ಭಾವನೆಯು ತನ್ನ ಪ್ರಭಾವವನ್ನು ಯಾವ ಹಂತಕ್ಕೆ ಹರಡಿದೆ ಎಂದರೆ, ಅಲ್ಲಿನ ಆಧುನಿಕ ಮಹಿಳೆಯರ ತಂಡವೊಂದು ತಾವು ಸ್ತ್ರೀಯರೆಂಬ ವಾಸ್ತವಾಂಶವೊಂದರ ಕುರಿತಂತೆಯೇ ಲಜ್ಜಿತರಾಗುತ್ತಿರುವರು. ಮಕ್ಕಳನ್ನು ಹೆರುವುದನ್ನು, ಪರಿಯನ್ನು ಹಾಗೂ ಮಕ್ಕಳನ್ನು ಆರೈಕೆಮಾಡುವುದನ್ನೂ ಅವರು ಅಪಮಾನಕಾರಕವೆಂದು ಭಾವಿಸತೊಡಗಿದ್ದಾರೆ. ಓರ್ವನ ಮಾನವೀಯ ಗುಣಧರ್ಮವನ್ನು ಅಖಂಡವಾಗಿರಿಸಿ ನಡೆಯುವ ಯಾವುದೇ ಕಾಯಕವು ಅಪಮಾನಾಸ್ಪದವಾದುದೇನೂ ಆಗದು. ಬಡತನವು ಹೀನಾಯವಾದ್ದೇನಲ್ಲವೆಂಬಂತಹ, ಇತರರ ಸೇವೆ ಮಾಡುವುದು ಕೀಳೇನಲ್ಲವೆಂಬಂತಹ ಮತ್ತು ಯುವುದೇ ಸನ್ನಿವೇಶದಲ್ಲಿಯೂ ತಾನು ಮಾಡುವ ಕಾಯಕ ಗೌರವಾಸ್ಪದವೇ ಎಂಬಂತಹ ಈ ರೀತಿಯ ಧೋರಣೆಗಳಿಗೆ ಯೂರೋಪಿನಲ್ಲಿ ಆಸ್ಪದವೇ ಇಲ್ಲ. ಇದರಿಂದಾಗಿ, ಪ್ರತಿಯೊಬ್ಬರೂ ಅವರು ಸಮರ್ಥರಾಗಿರಲಿ ಆಗಿರದೆ ಇರಲಿ ಸಾಮಾಜಿಕ ವರ್ಗೀಕರಣದ ತುದಿಯನ್ನು ತಲುಪಲು ಹೆಣಗುತ್ತ, ಬರಡು ಪರಿಶ್ರಮಗಳನ್ನು ಹಾಗೂ ನಿರರ್ಥಕ ಕಾಯಕಗಳ ಅಂತ್ಯಗೊಳ್ಳದ ಹೊಯಿಲು ಹೊಳೆಯನ್ನು ಹಾಗೂ ಸ್ವವಿನಾಶಕಾರಕ ಸಹಸೋದ್ಯಮಗಳನ್ನು ಸಮಾಜದಲ್ಲಿ ಸೃಷ್ಟಿಸುವರು. ಮನೆಯನ್ನು ಸ್ವಚ್ಛಗೊಳಿಸುವುದು, ನೀರು ಸೇದುವುದು, ಮಸಾಲೆ ಪದಾರ್ಥಗಳನ್ನು ಕುಟ್ಟಿ ಅರೆಯುವುದು ಹಾಗೂ ಮನೆಯಲ್ಲಿ ಅತಿಥಿಗಳಿಗೂ ಬಂಧುಬಳಗದವರೆಲ್ಲರಿಗೂ ಊಟ ಬಡಿಸಿ ಎಲ್ಲರೂ ಉಂಡನಂತರ ಕೊನೆಯಲ್ಲಿ ತಾನು ಉಣ್ಣುವುದು – ಇವೆಲ್ಲ ಯೂರೋಪಿನವರ ದೃಷ್ಟಿಯಲ್ಲಿ ಅಪಮಾನ, ದಬ್ಬಾಳಿಕೆಗಳು. ಆದರೆ, ನಮ್ಮ ದೃಷ್ಟಿಯಲ್ಲಿ ಅವು ಓರ್ವ ಮನೆಯೊಡತಿ ಘನತೆ ಪಡೆದ ಹಕ್ಕುಗಳು. ಆಕೆಯು ಅವುಗಳಿಂದ ವಿಶೇಷ ಅರ್ಹತೆಯನ್ನು ಹಾಗೂ ಗೌರವವನ್ನು ಗಳಿಸುವಳು.

ಸಂತೃಪ್ತಿಯು ತನ್ನದೇ ಆದ ವಿಕಾರಗಳನ್ನು ಹೊಂದಿದೆ ಎನ್ನುವ ಮಾತ್ರಕ್ಕೆ, ಅಪರಿಮಿತವಾದ ಮಹಾತ್ವಾಕಾಂಕ್ಷೆಗೆ ವಿಕಾರಗಳಿಲ್ಲವೆಂದೆ? ಈ ತರ್ಕವನ್ನು ಯಾರು ತಾನೆ ಒಪ್ಪುವರು? ಒಂದು ವೇಳೆ ಸಂತೃಪ್ತಿಯು ಮೂಡಿಸುವ ಸಮಾಧಾನವು ಕಾಯಕದಲ್ಲಿ ಆಲಸ್ಯವನ್ನು ತರುವುದು ನಿಜವೆಂದಲ್ಲಿ, ಯಾವಾಗ ಮಿತಿಮೀರಿದ ಹೆಬ್ಬಯಕೆಗಳು ತೀವ್ರತೆ ಪಡೆದುಕೊಳ್ಳುವವೋ ಆಗ ಅನಗತ್ಯ ಹಾಗೂ ದುರ್ಧರ ಹಾನಿಕಾರಕ ಕಾಯಕಗಳ ಆಧಿಕ್ಯವನ್ನು ಅದು ಸೃಷ್ಟಿಸುವುದು – ಎಂಬ ಸತ್ಯಾಂಶವನ್ನು ನಾವು ಹೇಗೆ ತಾನೇ ಅಲಕ್ಷಿಸಬಲ್ಲೆವು? ಒಂದು ಜಾಡ್ಯದ ಮೂಲಕ ಸಾವು ತಂದಲ್ಲಿ, ಇನ್ನೊಂದು ದೌರ್ಜನ್ಯದ ಮೂಲಕ ಸಾವು ತರುವುದು. ಅದು ಸಂತೃಪ್ತತೆ ಇರಬಹುದು

ಅಥವಾ ಮಹತ್ವಾಕಾಂಕ್ಷೆಯೇ ಇರಬಹುದು. ಇವೆರಡರಲ್ಲಿನ ಮಿತಿಮೀರುವಿಕೆಯು ವಿಪತ್ತನ್ನು ತರುವುದೆಂಬುದನ್ನು ಮಾತ್ರ ನೆನೆಪಿನಲ್ಲಿರಿಸಲೇಬೇಕಾಗುವುದು.

ಆದುದರಿಂದ ಈ ಚರ್ಚೆಯಲ್ಲಿ ಮುಂದುವರಿಯುವ ಬದಲಾಗಿ, ಸಂತೃಪ್ತಿ, ಆತ್ಮಸಂಯಮ, ಸ್ವಾಸ್ಥ್ಯ, ಕ್ಷಮಾಗುಣ - ಇವೆಲ್ಲ ಉಚ್ಚನಾಗರಿಕತೆಯ ವೈಶಿಷ್ಟ್ಯಗಳೆಂದು ಮನಃಪೂರ್ವಕವಾಗಿ ಸ್ವೀಕರಿಸುವುದೊಳ್ಳೆಯದು. ನಿಜ, ಇಲ್ಲಿ, ಪೈಪೋಟಿಯ ಅಗ್ನಿಶಿಲೆಗಳು ಸಂಘರ್ಷಣೆಯ ಶಬ್ದಗೈಯಲು ಅಥವಾ ಅಗ್ನಿಕಣಗಳ ಮಳೆಗರೆಯಲು ಒಂದಕ್ಕೊಂದು ಬಡಿದಾಡುವುದಿಲ್ಲ. ಬದಲಿಗೆ, ಇಲ್ಲಿರುವುದು ವಜ್ರದ ಸುಕೋಮಲ ನಿಶ್ಶಬ್ದ ತೇಜಸ್ಸು. ಇಂತಹ ತೇಜಸ್ಸಿಗಿಂತಲೂ, ಆ ಶಬ್ದವನ್ನು ಹಾಗೂ ಆ ಕಿಚ್ಚನ್ನು ಹೆಚ್ಚು ಮೌಲ್ಯವಾದುದೆಂದು ಪರಿಗಣಿಸುವುದು ಅಸಂಸ್ಕೃತಿಯೆನಿಸೀತು. ಒಂದೊಮ್ಮೆ, ಅಂತಹ ನಾಗರಿಕತೆಯು ಯೂರೋಪಿನ ನಾಗರಿಕತೆಯ ಶಾಲೆಗಳಲ್ಲಿಯೇ ಪೋಷಿಸಲ್ಪಟ್ಟರುವುದು ಎಂದಾಗಲೂ, ಅದು ಅನಾಗರಿಕತೆಯೇ.

ಈ ದಿನ, ನವವರ್ಷದ ಈ ಸಂದರ್ಭದಲ್ಲಿ, ನಮ್ಮ ಸ್ವಭಾವದ ಅತ್ಯಂತ ಆಳದಲ್ಲಿನ ಕೊಠಡಿಯಲ್ಲಿ ಅತ್ಯುಜ್ವಲವಾಗಿ ನೆಲೆಸಿರುವ ಚಿರಂತನ ಭರತವರ್ಷವನ್ನು ನಾನು ಪ್ರಸ್ತಾವಿಸಿದೆ. ಅಲ್ಲದೆ, ಈ ಭಾರತೀಯನ ಚರಣಗಳಲ್ಲಿ ನತಮಸ್ತಕನಾದೆ. ಆತನು ತನ್ನ ಧ್ಯಾನಪೀಠದ ಮೇಲೆ, ಪ್ರತಿಫಲಕ್ಕಾಗಿ ಕಾಮಿಸುತ್ತಿರುವ ಕಾಯಕಗಳ ಅತ್ಯುತ್ತೇಜಿತ ಮುನ್ನುಗ್ಗುವಿಕೆಯಿಂದ ಮುಕ್ತಗೊಂಡು ಭವ್ಯವಾಗಿ ಹಾಗೂ ಪ್ರಶಾಂತವಾಗಿ ಆಸೀನನಾಗಿರುವುದನ್ನು, ಮಂದ-ಜಡ ಸಂದಣಿಯ ಅವಿಚ್ಛಿನ್ನ ಅರೆಯುವಿಕೆಯಿಂದ ಸ್ವತಂತ್ರವಾಗಿ ತನ್ನದೇ ಆದ ಏಕಾಂತತೆಯಲ್ಲಿ ಮುಳುಗಿದವನಾಗಿ ಕುಳಿತಿರುವುದನ್ನು, ಮತ್ತು ಪೈಪೋಟಿಯ ಮೂರ್ಖ ಘರ್ಷಣೆಯ ಹಾಗೂ ಈರ್ಷ್ಯೆಯ ಮಲಿನಗೈಯುವ ಅಂಧಕಾರದಿಂದ ಮುಕ್ತಗೊಂಡವನಂತಾಗಿ ತನ್ನದೇ ಆದ ವಿಚಲ ಘನತೆಯಲ್ಲಿ ಆಸೀನನಾಗಿರುವುದನ್ನು ಅಲ್ಲಿ ನಾನು ಕಂಡೆ. ಕಾಯಕದ ಭಾವೋದ್ರೇಕದಿಂದ, ದೊಂಬಿಯ ಆತುರಗಳಿಂದ ಹಾಗೂ ಆಕ್ರಮಣದ ಭಾವೋದ್ವಿಗ್ನತೆಯಿಂದ ದೂರ ಉಳಿಯುವುದೇ ಸಮಗ್ರ ಭರತವರ್ಷವನ್ನು, ಬ್ರಹ್ಮನೆಡೆಗಿನ ಪಥದಲ್ಲಿ ಭೀತಿಯಿಂದ ಮುಕ್ತವಾದ, ದುಃಖದಿಂದ ಮುಕ್ತವಾದ ಹಾಗೂ ಸಾವಿನಿಂದ ಮುಕ್ತವಾದಂತಹ ಆ ಚರಮ ವಿಮೋಚನೆಯ ಪಥದಲ್ಲಿ ನಡೆಸಿರುವುದು.

ಇಂತಹ ವಿಮೋಚನೆಯೊಂದಿಗೆ ಹೋಲಿಸಲ್ಪಟ್ಟಾಗ, ಯಾವ ವಿಮೋಚನೆಯನ್ನು 'ಸ್ವಾತಂತ್ರ್ಯ'ವೆಂದು ಯೂರೋಪ್ ಕರೆಯುತ್ತಲಿರುವುದೋ ಅದು ಗಣನೆಗೂ ಬಾರದಷ್ಟು ಅಲ್ಪವೆನಿಸುವುದು. ಇಂತಹ 'ಸ್ವಾತಂತ್ರ್ಯ'ವು ಸ್ತಿಮಿತವಲ್ಲದ್ದು, ಬಲಹೀನವಾದುದು, ಪುಕ್ಕಲುತನದ್ದು; ಅದು ಅಹಂಕಾರದಿಂದ ಕೂಡಿದುದು, ಕ್ರೂರವಾದುದು, ಇತರರ ಯೋಗಕ್ಷೇಮಕ್ಕೆ ಸ್ಪಂದನಹೀನವಾದದು. ಧರ್ಮವನ್ನದು ತನಗೆ ಸಮಾನವೆಂದಾಗಿಯೂ ಪರಿಗಣಿಸದು; ಅಲ್ಲದೆ, ಸತ್ಯವನ್ನದು ಅಡಿಯಾಳಾಗಿಸಲು ಹಾಗೂ ಅದನ್ನು ವಿರೂಪಗೊಳಿಸಲೂ ಬಯಸುವುದು. ಸತತವಾಗಿ ಇತರರಿಗೆ ಅದು ನೋವನ್ನುಂಟುಮಾಡುವುದು. ಹೀಗಾಗಿ, ಇತರರಿಂದ ಹಲ್ಲೆಗೊಳಗಾಗುವ ಭೀತಿಯಿಂದ, ಶಸ್ತ್ರಾಸ್ತ್ರಯುಕ್ತವಾಗಿ, ಕವಚ-ಗುರಾಣಿಗಳನ್ನು ಧರಿಸಿ ಹಗಲಿರುಳು ಅದು ಉದ್ವೇಗದಿಂದಿರುವುದು. ಅದು ತನ್ನ ಆತ್ಮರಕ್ಷಣೆಗಾಗಿ

ಸ್ವಜನರಲ್ಲಿಯೇ ಬಹುಸಂಖ್ಯಾತರನ್ನು ದಾಸ್ಯ ಸಂಕೋಲೆಯಲ್ಲಿ ಇರಿಸಿರುವುದು. ಅದರ ಅಸಂಖ್ಯ ಯೋಧರು, ನಿಜ ಅರ್ಥದಲ್ಲಿ ಮಾನವೀಯ ಚಾರಿತ್ರ್ಯದಿಂದ ವಿಹೀನರಾದಂತಹ ಭಯಂಕರ ಯಂತ್ರಗಗಳೇ ಆಗಿರುವರು.

ಇಂತಹ ರಾಕ್ಷಸಸದೃಶ ಸ್ವಾತಂತ್ರ್ಯವು ಎಂದಿಗೂ ಭರತವರ್ಷದ ಅನ್ವೇಷಣೆಯ ಅಂತಿಮ ಲಕ್ಷಣವಾಗಿರಲಿಲ್ಲ. ಕಾರಣವಿಷ್ಟೆ: ನಮ್ಮಲ್ಲಿನ ಸಾಮಾನ್ಯ ಜನರು ಇನ್ನಿತರ ದೇಶಗಳಲ್ಲಿನ ಸಾಮಾನ್ಯ ಜನರಿಗಿಂತ ನಿಜ ಅರ್ಥದಲ್ಲಿ ಸ್ವತಂತ್ರರಾಗಿದ್ದರು. ಈಗಲೂ ಆಧುನಿಕ ಯುಗದ ಹೀನೈಸುವಿಕೆಯ ಹೊರತಾಗಿಯೂ, ಆ ತೆರೆನಾದ ಸ್ವಾತಂತ್ರ್ಯವು ನಮ್ಮ ಜನ ಸಾಮಾನ್ಯರಲ್ಲಿ ಪ್ರಯತ್ನಶೀಲರ ಪರಮೋಚ್ಚ ಗುರಿಯಾಗಲಾರದು.

ಅಲ್ಲದೆ ಅದು ಪ್ರಾಮುಖ್ಯವುಳ್ಳದ್ದೇನೋ ಆಗದು. ಏಕೆಂದರೆ, ಈ ತೆರೆನಾದ ಸ್ವಾತಂತ್ರ್ಯಕ್ಕಿಂತಲೂ ಉನ್ನತವಾಗಿರುವ, ಹಿರಿದಾಗಿರುವ ಶ್ರೇಷ್ಠತೆಯನ್ನು – ಯವುದು ಭರತವರ್ಷದ ಅನರ್ಘ್ಯ ಸ್ವತ್ತಾಗಿರುವಂತಹ ವಿಮುಕ್ತಿಯಾಗಿರುವುದೋ, ಅಲ್ಲದೆ ಯಾವುದು ತೀಕ್ಷ್ಣ ಆಧ್ಯಾತ್ಮಿಕ ಅನ್ವೇಷಣೆಯ ಮೂಲಕ ಅರ್ಜಿಸಲ್ಪಟ್ಟಿರುವುದೋ, ಅಂತಹುದನ್ನು ಒಂದೊಮ್ಮೆ ನಾವು ಆಹ್ವಾನಿಸಿ ಮತ್ತೊಮ್ಮೆ ಈ ನಮ್ಮ ಸಮಾಜದ ನಡುವೆ ಕರೆತರುವಂತಾದಲ್ಲಿ ಹಾಗೂ ಅದನ್ನು ನಮ್ಮ ಹೃದಯಗಳಲ್ಲಿ ಪ್ರತ್ಯಕ್ಷಿಕರಿಸಿಕೊಂಡಿದ್ದೇ ಆದಲ್ಲಿ, ಅನಂತರ ಭರತವರ್ಷದ ಬರಿದಾದ ಪಾದಗಳ ಧೂಳಿಯೂ ವಿಶ್ವದ ಪರಮ ಬಲಿಷ್ಠ ಗದ್ದುಗೆಗಳನ್ನು ಪರಿಶುದ್ಧಗೊಳಿಸೀತು, ಪವಿತ್ರಗೊಳಿಸೀತು.

ನವವರ್ಷದ ನನ್ನ ಈ ಧ್ಯಾನ ಚಿಂತನೆಯನ್ನು ನಾನಿಲ್ಲಿ ಪೂರ್ಣಗೊಳಿಸುತ್ತಿರುವೆ. ಇದು ನನ್ನ ಭೂತಕಾಲವನ್ನು ಪ್ರವೇಶಿಸಿದೆ. ಏಕೆಂದರೆ, ಭೂತಕಾಲವು ಚಿರಂತನ ನಾವೀನ್ಯದ, ತಾಜಾತನದ ಅಕ್ಷಯ ಭಂಡಾರವೇ ಆಗಿದೆ. ಉಲ್ಲಾಸಭರಿತ ಎಳೆಯ ಸಸಿಗಳ ಏನೆಲ್ಲ ಶೃಂಗಾರದಿಂದ ಈ ದಿನದಂದು ಈ ಉತ್ಸವಕ್ಕಾಗಿ ಪ್ರಕೃತಿದೇವಿಯು ಅಲಂಕೃತಳಾಗಿರುವಳೋ, ಅಂತಹ ಈ ಉಡುಪು ಹೊಚ್ಚಹೊಸದಾದುದೇನಲ್ಲ. ಅಂದು, ಮೊದಲ ಮುಂಬೆಳಗಿನ ವೈಭವವನ್ನು ಗಾನ ಗೈದ ಋಷಿಕವಿವರ್ಯರು ಕೂಡ, ದೇವಿಯು ಇದೇ ಬಗೆಯ ಮೃದು ಪಚ್ಚೆಯ ಶೃಂಗಾರದುಡುಪಿನಲ್ಲಿ ಅಲಂಕೃತಗೊಂಡಿರುವುದನ್ನು ಕಂಡಿದ್ದರು. ಮೃದು ಮಂದಾನಿಲದಲ್ಲಿ ಕಂಪಿಸುತ್ತಲಿದ್ದ ಹೂಗಳ ಕಂಪು ಸೂಸುತ್ತಲಿದ್ದ, ಹಾಗೂ ಮುಂಜಾವಿನ ನೇಸರನ ಹೊಂಗಿರಣಗಳಲ್ಲಿ ಸರೆಯಾದಂತಹ ಅಚ್ಚ ಅದೇ ಉಡುಗೆಯು ಉದ್ಯಾನನಗರಿ ಉಜ್ಜಯನಿಯಲ್ಲಿ ಕಾಳಿದಾಸನ ಮೋಹಕ ಕಣ್ಣುಗಳೆದುರಲ್ಲಿ ಅಂದು ಥಳಥಳಿಸಿತ್ತು. ಯಾವಾಗ, ಸದಾ ಸಹಿಷ್ಣುವಾಗಿ ಬಾಳಿಬರುತ್ತಲಿರುವ ಈ ಪ್ರಾಚೀನತೆಯನ್ನು ನಾವೀನ್ಯದಲ್ಲಿ ಅನುಭವಿಸಲು ನಾವು ಶಕ್ತರಾಗುವುವೆವೋ, ಆಗ ಮಾತ್ರ ನಮ್ಮ ಶಕ್ತಿಗುಂದಿದ ಈ ಬದುಕು ಚಿರಂತನ ಯೌವನದಲ್ಲಿ ಮುಳುಗೇಳಬಹುದು.

ಈ ನಲವತ್ತು ವರ್ಷದಲ್ಲಿ ಭರತವರ್ಷದ ಕಳೆದುಹೋದ ವರ್ಷಗಳ, ಸಾವಿರಾರು ವರ್ಷಗಳಷ್ಟು ಪ್ರಾಚೀನವಾದಂತಹ ಹಿಂದಿನ ಆ ಅನುಭೂತಿಯನ್ನು ಹೊಂದಲು ನಾವು ಶಕ್ತರಾದಲ್ಲಿ, ಆಗ ಮಾತ್ರ ನಮ್ಮೆಲ್ಲ ಇಂದಿನ ಸಂದೇಹಗಳು ಕಣ್ಮರೆಯಾದಾವು. ಒಂದು ವೇಳೆ, ಮರವೊಂದನ್ನು, ಎರವಲು ಪಡೆದ ಹೂವುಗಳಿಂದ, ಎಲೆಗೊಂಚಲುಗಳಿಂದ ಸಿಂಗರಿಸಿದ್ದೇ ಆದಲ್ಲಿ, ಅಂತಹ ಅಲಂಕಾರ ಒಂದು ದಿನ

ಮಾತ್ರವೇ ಉಳಿದೀತು. ಈ ತೆರನಾದ ನಾವೀನ್ಯವು ತ್ವರಿತವಾಗಿ ಕಮರಿ ಹೋಗುವುದನ್ನು ಯಾರೊಬ್ಬರೂ ತಡೆಯಲಾರರು. ಬೇರೆಡೆಯಿಂದ ಎರವಲು ಪಡೆದಂತಹ ಹೊಸ ಶಕ್ತಿ ಹಾಗೂ ಸಂಸ್ಕೃತಿಗಳಿಂದ ನಾವು ನಮ್ಮನ್ನು ಸಿಂಗರಿಸಿಕೊಳ್ಳಲು ಬಯಸಿದಲ್ಲಿ, ಆಗ, ಅನತಿ ಕಾಲಾವಧಿಯಲ್ಲೇ ಅಂತಹ ಪ್ರಯತ್ನವು ಕುಸಿದು ಬಿದ್ದಂತಹ, ಕುರೂಪಗೊಂಡಂತಹ ಹೂಮಾಲೆಯೊಂದರಂತೆ, ತುಚ್ಛೀಕರಿಸಲ್ಪಡುವ ವಸ್ತುವಿನಂತೆ ಆಗುವುದು. ಹೂಗಳು ಹಾಗೂ ಗೊಂಚಲುಗಳು ಉದುರಿಹೋಗುವವು; ನಾರು ಮಾತ್ರ ಅಲ್ಲೇ ಉಳಿಯುವುದು. ಈ ವಿದೇಶಿ ಪೋಷಾಕುಗಳು ಹಾಗು ಪರಕೀಯ ವಿಲಕ್ಷಣ ಹಾವಭಾವಗಳು ಬಹು ಬೇಗನೆ ಮಲಿನವಾಗಿ ಬದಲಾಗುವುವು ಹಾಗೂ ನಮ್ಮ ನಡುವೆ ಅನುಚಿತವೆನಿಸುವುವು; ವಿದೇಶಿ ಶಿಕ್ಷಣ, ಪರಕೀಯ ಉಡುಗೆ ತೊಡುಗೆಗಳು ನಮ್ಮ ಮನದಲ್ಲಿ ಜಡವಾಗುವುವು, ಬರಡಾಗುವುವು. ಅದಕ್ಕೆ ಕಾರಣವಿಷ್ಟೆ: ಈ ಎಲ್ಲ ಪರಕೀಯತೆಗಳ ಹಿಂದೆ ಸುದೀರ್ಘಕಾಲಾವಧಿಯ ಇತಿಹಾಸವಿಲ್ಲ. ಅವು ಅಸಮಂಜಸವಾದಂತಹವು, ಅನುಚಿತವಾದವು ಹಾಗೂ ನಮ್ಮ ಬೇರುಗಳಿಂದ ಕಡಿದುಕೊಂಡತಹವು.

ನಾವು ನಮ್ಮ ಆಧುನಿಕತೆಯನ್ನು ಭರತವರ್ಷದ ಸನಾತನ ಗತಕಾಲದಿಂದ ಪಡೆಯೋಣ. ಇಲ್ಲಿನ ಸಂಜೆಯ ಘಂಟಾನಾದ ಮೊಳಗಲಿ. ಪ್ರತಿಬಾರಿಯೂ ವಿಶ್ರಾಂತಿಯ ವೇಳೆಯನ್ನು ಸೂಚಿಸಿದಾಗಲೂ ನಮ್ಮ ಈ ತೆರೆನಾದ ಹೂ ಮಾಲೆಯು ಸೊರಗಲಾರದು. ತದನಂತರ, ನಾವು ಇಂತಹ ಬಾಡದ ಹೂ ಹಾರವನ್ನು ನಮ್ಮ ಮಕ್ಕಳ ನೊಸಲಲ್ಲಿರಿಸಿ, ನಿರ್ಭೀತ ಮನಸ್ಕರಾಗಿ ಹಾಗೂ ಚೈತನ್ಯಭರಿತರಾಗಿ ಅವರನ್ನು ಆಶೀರ್ವದಿಸುತ್ತಾ, ದಿಗ್ವಿಜಯದ ಪಥದಲ್ಲಿ ಕಳುಹಿಸಿಕೊಡೋಣ. ಅಂತಿಮವಾಗಿ ಜಯಶೀಲರಾಗುವುದು ಭರತವರ್ಷವೇ; ಈ ವಿಚಾರದಲ್ಲಿ ಶಂಕೆಗೆ ಅವಕಾಶವಿರದು. ಭಾರತವು, ಯಾವುದು ಸನಾತನವೋ, ಯಾವುದು ಅಡಗಿಕೊಂಡಂತಿಹುದೋ, ಯಾವುದು ವಿಶಾಲವಾಗಿಹುದೋ, ಯಾವುದು ಉದಾತ್ತವಾದುದೋ, ಯಾವುದು ಮೌನವಾಗಿಹುದೋ, ಅದುವೇ ಜಯಶಾಲಿಯಾಗುವುದು. ಇನ್ನೊಂದೆಡೆ ನಾವು ಯಾರು ಇಂಗ್ಲಿಷ್‌ನಲ್ಲಿ ಸಂಭಾಷಿಸುತ್ತಿರುವೆವೋ, ವಿಲಕ್ಷಣ ತಿರಸ್ಕಾರದ ಮಾನಸಿಕತೆಗೆ ಬದ್ಧರಾಗಿ ಭಾವವಿಹೀನರಾಗುರುವೆವೋ, ಯಾರ ಬಾಯಲ್ಲಿ ಹುಸಿಯೇ ಬರುತಿಹುದೋ, ಬಡಯಿಯನ್ನೇ ಕೊಚ್ಚುತ್ತಿರುವೆವೋ – ಈ ನಾವು ವರಷಗಳುರುಳಿದಂತೆ ಸಾಗರದಲ್ಲಿ ಅಲೆಗಳ ಮೇಲೊಂದು ಅಲೆ ಮೇಲೊಂದು ಬಂದು ಕುಸಿದು ಲೀನವಾಗುವಂತೆಯೇ ಕುಸಿದು ಕಣ್ಮರೆಯಾಗುವೆವು. ಅದು ಏನೇ ಆದರೂ, ಪ್ರಶಾಂತ ಚಿರಂತನ ಭರತವರ್ಷಕ್ಕೆ ಅದು ಯಾವ ಹಾನಿಯನ್ನೂ ಉಂಟುಮಾಡಲಾರದು.

ಆ ಬೈರಾಗಿ ಭಾರತೀಯನಾದರೋ ಪವಿತ್ರಾಗ್ನಿಯ ಭಸ್ಮ ಲೇಪಿತನಾಗಿ, ಮೌನವ್ರತಸ್ಥನಾಗಿ ನಮ್ಮ ದಾರಿಗಳು ಕೂಡುವೆಡೆ, ಕೃಷ್ಣಾಜಿನದಾಸನದಲ್ಲಿ ಕುಳಿತು ರೋದಿಸುತ್ತಿದ್ದಾನೆ. ಯಾವಾಗ ನಮ್ಮ ಕ್ಷುಲ್ಲಕ, ಕ್ಷುದ್ರ ಚಟುವಟಿಕೆಗಳೆಲ್ಲವನ್ನೂ ಪೂರೈಸಿ ನಮ್ಮ ಪುತ್ರಪುತ್ರಿಯರನ್ನು ಕೋಟು–ಫ್ರಾಕುಗಳೇ ಮೊದಲಾದ ಪರಕೀಯ ಪೋಷಾಕುಗಳಲ್ಲಿ ಸಿಂಗರಿಸಿ ನಾವು ಅಸುನೀಗಿ ಹೋಗುವೆವೋ, ಆಗಲೂ ನಮ್ಮ ಮಕ್ಕಳು

ಮರಿಮೊಮ್ಮಕ್ಕಳಿಗಾಗಿ ತಾಳ್ಮೆಯಿಂದ ಆತನು ಕಾದಿರುತ್ತಾನೆ. ಆ ಕಾಯುವಿಕೆಯು ವ್ಯರ್ಥಗೊಳ್ಳದು. ಅವರು ಬಂದೇಬರುವರು. ಆ ಯತಿಯ ಎದುರಲ್ಲಿ ಕೈಮುಗಿದು ನಮಿಸುವರು, "ಪರಮಪೂಜ್ಯನೇ, ನಮಗೆ ಬೋಧಿಸುವಂತಹವನಾಗು" – ಎಂದು ಅವರು ಬೇಡುವರು.

ಆತ ನುಡಿಯುತ್ತಾನೆ: "ಓಂ ಇತಿ ಬ್ರಹ್ಮ."

ಆತ ನುಡಿಯುತ್ತಾನೆ: "ಭೂಮ್ಯೈವ ಸುಖಂ, ನಾಲ್ಪೇ ಸುಖಮಸ್ತಿ."

ಆತ ನುಡಿಯುತ್ತಾನೆ: "ಆನಂದಂ ಬ್ರಹ್ಮಣೋ ವಿದ್ವಾನ್, ನ ಬಿಭೇತಿ ಕದಾಚನ."

(ಶಾಂತಿನಿಕೇತನದಲ್ಲಿ ೧೯೦೩ರ ಏಪ್ರಿಲ್‌ನಲ್ಲಿ ನವವರ್ಷ ಸಂದರ್ಭದಲ್ಲಿ ಠಾಕೂರರು ಮಾಡಿದ ಉಪನ್ಯಾಸದಿಂದ ಆಯ್ದ ಭಾಗಗಳು)

– ಸಾಭಾರ : ಉತ್ಥಾನ – ಕನ್ನಡಕ್ಕೆ : ಶ್ರೀನಾಥ ಜೋಶಿ

* * *

ಸನ್ಮಾನ್ಯರಿಂದ...

ಅಕ್ಟೋಬರ್ ತಿಂಗಳಿನ 'ಜನಪದ ವಿಚಾರ' ಬಂದು ತಲುಪಿತು. ಅದರಲ್ಲಿ ನೀವು ಬರೆದಿರುವ 'ಸಬ್‌ಕೊ ಸನ್ಮತಿ ದೇ ಭಗವಾನ್' ಎಂಬ ಲೇಖನವು ಈ ಕಾಲಕ್ಕೆ ಬಹಳ ಪ್ರಸ್ತುತವಾಗಿದೆ. ಸಕಾಲಿಕವಾಗಿದೆ. ಬಹಳ ಸಂತೋಷವಾಯಿತು. ಅದರಿಂದ ಜನರು ಎಚ್ಚೆತ್ತುಕೊಳ್ಳುವರೋ ಇಲ್ಲವೋ ತಿಳಿಯದು. ಸಮಾಜದ ಜನಗಳ ಸ್ವಭಾವ ನೋಡಿದರೆ 'ಇಲ್ಲ' ಅಂತಲೇ ಹೇಳಬೇಕು. ನಾನೂ ಶಂಕರಜಯಂತಿ, ರಾಮನವಮಿ, ಗೋಕುಲಾಷ್ಟಮಿ ಇವುಗಳಲ್ಲೆಲ್ಲ ಬಹಳ ಉತ್ಸಾಹವಾಗಿ ಭಾಗವಹಿಸುತ್ತಿದ್ದೆ. ಅವೆಲ್ಲವೂ ನೀವು ಬರೆದಿರುವಂತೆ, ಕೀಳುಮಟ್ಟದ ಆಮೋದ ಪ್ರಮೋದಗಳ ವೇದಿಕೆಗಳಾಗಿವೆಯೇ ಹೊರತು ಭಗವತ್ಪಾದರ ಉದಾತ್ತ ವೇದಾಂತವನ್ನಾಗಲಿ, ಶ್ರೀ ರಾಮಚಂದ್ರನ ಕಲ್ಯಾಣ ಗುಣಗಳನ್ನಾಗಲಿ, ಶ್ರೀಕೃಷ್ಣನ ಧರ್ಮಪರಿಪಾಲನೆಯ ಸೊಗಸನ್ನಾಗಲಿ ಪ್ರತಿಬಿಂಬಿಸುತ್ತಿಲ್ಲ. (ಆಚರಿಸುವುದು ಒತ್ತೊಟ್ಟಿಗೇ ಇರಲಿ) ಎನ್ನುವುದು ಮನಸ್ಸಿಗೆ ಬಂದು ಬಿಟ್ಟುಬಟ್ಟೆ. ಉಪನ್ಯಾಸಗಳನ್ನು ಮಾಡುತ್ತಾರೆ. ಅದರಲ್ಲಿ ಹತ್ತನೆಯ ಒಂದು ಭಾಗವನ್ನಾದರೂ ತಾವು ಆಚರಿಸಿತೋರಿಸಿದರೆ ಜನತೆಗೆ 'ರೋಲ್ ಮಾಡೆಲ್'ಗಳಾಗಬಹುದು. ಆದರೆ ಕಿಂಚಿತ್ತಾದರೂ ಅಭ್ಯಾಸದಲ್ಲಿಲ್ಲದಿರುವುದನ್ನು ನೋಡಿದಾಗ, ಕೇವಲ ಮಾತುಗಳಿಂದ ಜನತೆಯನ್ನು ತಿರುಗಿಸಲು ಸಾಧ್ಯವೇ?

ಇದೇ ಅಂಶಗಳು ನಾವು ಇವತ್ತು ನಡೆಸುತ್ತಿರುವ ಸಮಸ್ತ ವೈದಿಕ ಕರ್ಮಗಳಲ್ಲಿಯೂ ಕಾಣಿಸುತ್ತಿವೆ. ನಾನು ನನ್ನ ವೃತ್ತಿಯ ಜತೆಗೆ ವೇದಾಧ್ಯನಮಾಡಿ, ಪ್ರಯೋಗವನ್ನು ಅಭ್ಯಾಸ ಮಾಡಿದೆ. ಆದರೆ ಅವುಗಳು ನಡೆಯುವ ರೀತಿ ಯಾಕೋ ಜುಗುಪ್ಸೆ ತರುತ್ತಿದೆ. 'ತ್ಯಾಗವಿಲ್ಲದ ಪೂಜೆ'ಯನ್ನು ಪಾಪವೆಂದು ಗಾಂಧೀಜಿ ಹೇಳಿದರೆ, ನಾವುಗಳು ಆಡಂಬರವೇ ಪೂಜೆ ಎಂದು ಮಾಡುತ್ತಿದ್ದೇವೆ. ಇವುಗಳನ್ನೆಲ್ಲ ನೋಡಿ ಬೇಜಾರಾಗಿದೆ.

– ಶ್ರೀಕಂಠ ಕುಮಾರಸ್ವಾಮಿ, ಬೆಂಗಳೂರು

ಜನಪದ ಸೇವಾ ಟ್ರಸ್ಟ್ ಸಮಾಚಾರ

ಅಕ್ಟೋಬರ್ ೧೫ ರಂದು ಟ್ರಸ್ಟಿನ ಕಾರ್ಯಕಾರಿಣಿ ಸಭೆ ನಡೆಯಿತು. ಈ ಸಭೆಯಲ್ಲಿ ಟ್ರಸ್ಟಿನ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಕಾರ್ಯವರದಿಯ ಅಂಗೀಕಾರ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಸುರೇಂದ್ರ ಕೌಲಗಿಯವರು ವಹಿಸಿದ್ದರು. ಸದಸ್ಯರಾದ ಕೆ.ಮಾದೇಗೌಡರು, ಡಿ.ಪ್ರಭಾಕರ್, ಡಾ.ಮನೋಹರ್, ಗಿರಿಜಾಕೌಲಗಿ ಮತ್ತು ಸಂತೋಷ್ ಕೌಲಗಿಯವರು ಭಾಗವಹಿಸಿದ್ದರು. ಟ್ರಸ್ಟಿನ ಸ್ವರ್ಣ ಜಯಂತಿಯನ್ನು ಆಚರಿಸಲು ತೀರ್ಮಾನಿಸಲಾಯಿತು. ಈ ಸಂಬಂಧವಾಗಿ ಒಂದು ಉಪಸಮಿತಿಯನ್ನು ರಚಿಸಲಾಯಿತು. ಈ ಉಪಸಮಿತಿ ಇಷ್ಟರಲ್ಲಿಯೇ ಸಭೆ ಸೇರಿ ಸ್ವರ್ಣಜಯಂತಿ ಆಚರಣೆಯ ಸಂಬಂಧವಾಗಿ ಕಾರ್ಯಕ್ರಮಗಳ ರೂಪುರೇಷೆಯನ್ನು ತಯಾರಿಸುವುದು. ನಂತರ ಟ್ರಸ್ಟಿನ ಎಲ್ಲ ಹಿತೈಷಿಗಳಿಗೆ ವಿವರಗಳನ್ನು ತಿಳಿಸಿ ಅವರೆಲ್ಲರ ಸಹಾಯ ಮತ್ತು ಸಹಕಾರ ಕೋರಲಾಗುವುದು. ಟ್ರಸ್ಟಿನ ಕಾರ್ಯಚಟುವಟಿಕೆಗಳಾದ ಶಿಶುವಿಹಾರ, ಖಾದಿನೇಯ್ಗೆ ವಿಭಾಗ, ಖಾದಿ ಸಿದ್ಧ ಉಡುಪು ತಯಾರಿಕಾ ವಿಭಾಗ, ಖಾದಿ ಭಂಡಾರ ಮತ್ತು ನೃತ್ಯ ತರಗತಿ ಇತ್ಯಾದಿಗಳೆಲ್ಲವೂ ನಿಧಾನವಾಗಿ ಪ್ರಗತಿಯತ್ತ ಸಾಗುತ್ತಿವೆ. ಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿಯವರು ಸಾವಯವ ಕೃಷಿ ಸಂಬಂಧವಾಗಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರಲ್ಲದೆ ರೈತರ ಹಿತ ಕಾಪಾಡುವ 'ಪ್ರಜಾ ತೀರ್ಪು' ಕಾರ್ಯಕ್ರಮದಲ್ಲಿ ಸಹ ಭಾಗವಹಿಸಿದ್ದರು. ಗಾಂಧೀ ಜಯಂತಿ ಪ್ರಯುಕ್ತ ಟ್ರಸ್ಟಿನಲ್ಲಿ ಸ್ಥಳೀಯ ಕಾಲೇಜ್ ವಿದ್ಯಾರ್ಥಿಗಳಿಗೆ ಪ್ರಬಂಧ ಬರೆಯುವ ಕಾರ್ಯಕ್ರಮ ಏರ್ಪಡಿಸಿ, ನಂತರ ಬಹುಮಾನ ವಿತರಣೆಯನ್ನು ಏರ್ಪಡಿಸಲಾಗಿತ್ತು. ಟ್ರಸ್ಟಿನ ಅಧ್ಯಕ್ಷರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

೨೦೦೯ ಅಕ್ಟೋಬರ್ ಮಾಹೆಯ ದಾನಿಗಳು

ಶ್ರೀ ಬಾಪು ಸತ್ಯನಾರಾಯಣ, ಮೈಸೂರು
ಶ್ರೀ ಟಿ.ಎಸ್.ಶ್ರೀಧರ್; ಶ್ರೀಮತಿ ಮೀರಾವಲ್ಲಭ;
ಶ್ರೀ ಸಿ.ಎಸ್.ಬನಶಂಕರಯ್ಯ; ಶ್ರೀ ಕೆ.ಬಿ.ನಾರಾಯಣ್;
ಶ್ರೀ ಸಂಪತ್; ಶ್ರೀ ಸತ್ಯಪ್ರಕಾಶ್ ವಾರಣಾಸಿ – ಬೆಂಗಳೂರು
ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್
ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೨೨

– ಸುರೇಂದ್ರ ಕೌಲಗಿ



ಮತದಾರರ ವೇದಿಕೆ ಸ್ಥಾಪಿಸಿದ್ದು ಒಂದು ವಿಶೇಷ ಕಾರ್ಯಕ್ರಮವಾಗಿತ್ತು. ಇಂದಿನ ರಾಜಕಾರಣದಲ್ಲಿಯ ಅವ್ಯವಸ್ಥೆಗೆ ಮತದಾರನ ಅಜಾಗೃತಿಯೆ ಕಾರಣ. ದೇಶದಲ್ಲಿ ತುರ್ತು ಪರಿಸ್ಥಿತಿ ನಿರ್ಮಾಣವಾದದ್ದು ಈಕಾರಣದಿಂದಲೇ ಆದರೆ ಸುದೈವದಿಂದ ಗುಜರಾತಿನ ಮತ್ತು ಬಿಹಾರದ ವಿದ್ಯಾರ್ಥಿಗಳು ಹಾಗೂ ಯುವಕರು ಜಾಗೃತರಾಗಿ ತಮ್ಮ ರಾಜ್ಯಗಳ ಭ್ರಷ್ಟ ಸರ್ಕಾರಗಳನ್ನು ಉರುಳಿಸಿ ಇತಿಹಾಸ ನಿರ್ಮಿಸಿದರು. ಸ್ವಾತಂತ್ರ್ಯ ಚಳುವಳಿಯ ನಂತರ ಯುವಕರು ಮತ್ತು ವಿದ್ಯಾರ್ಥಿಗಳು ಈಬಗೆಯಾಗಿ ಸಂಘಟಿತರಾಗಿ ಹೋರಾಡಿದ್ದು ೧೯೭೫ರಲ್ಲಿ. ಕ್ರಾಂತಿಯ ನೇತ್ರತ್ವವಹಿಸಿಕೊಂಡಿದ್ದವರು. ಆ ಸಂದರ್ಭದಲ್ಲಿ ಅವರು ಸಂಪೂರ್ಣಕ್ರಂತಿಯ ವಿಚಾರವನ್ನು ದೇಶದ ಮುಂದೆ ಇಟ್ಟರು. ಈ ಕ್ರಾಂತಿಯ ಉದ್ದೇಶಗಳಲ್ಲಿ ಮತದಾರರ ಜಾಗೃತಿಯು ಒಂದಾಗಿತ್ತು. ಜೆ.ಪಿ.ಯವರಿಂದ ಪ್ರಭಾವಿತಗೊಂಡು ಮಂಡ್ಯ ಜಿಲ್ಲೆಯಲ್ಲಿ ಮತದಾರರ ಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಅದಕ್ಕಾಗಿ ಮಂಡ್ಯ ಜಿಲ್ಲಾ ಪಕ್ಷಾತೀತ ಮತದಾರರ ವೇದಿಕೆಯನ್ನು ಸ್ಥಾಪಿಸಲಾಯಿತು. ಆಗ ಕರ್ನಾಟಕದಲ್ಲಿ ಸಾರ್ವಜನಿಕ ಚುನಾವಣೆ ನಡೆಯುವುದರಲ್ಲಿತ್ತು. ಆಗ ಕರ್ನಾಟಕದಲ್ಲೂ ಸಹ ಬೇರೆಲ್ಲಾ ರಾಜ್ಯಗಳಂತೆ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಜನರಲ್ಲಿ ತುಂಬ ಅಸಂತೋಷವಿತ್ತು. ಜನರು ಹತಾಶಗೊಂಡಿದ್ದರು. ಆದ್ದರಿಂದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಮತದಾರರ ಜಾಗೃತಿಯೇ ಶ್ರೇಷ್ಠ ಉಪಾಯವೆಂದು ಭಾವಿಸಿ ಅವರ ಜಾಗೃತಿಯಲ್ಲಿ ತೊಡಗಬೇಕೆಂದು ನಿರ್ಧರಿಸಲಾಯಿತು. ಆದರೆ ಈ ಸಂಘಟನೆಯ ಬಳಿ ಯಾವ ಧನಶಕ್ತಿಯಾಗಲಿ, ಸಂಘಟನಾ ಶಕ್ತಿಯಾಗಲಿ ಇರಲಿಲ್ಲ. ಕೆಲಸವನ್ನು ಮಾಡುತ್ತಾಹೋದಂತೆ ಈ ಎರಡು ಶಕ್ತಿಗಳು ಕೂಡಿ ಬರುವವೆಂದು ನಿರೀಕ್ಷಿಸಲಾಗಿತ್ತು. ಆದ್ದರಿಂದ ಕೇವಲ ಆತ್ಮವಿಶ್ವಾಸದ ಬಲದಿಂದ ಮತದಾರರ ಜಾಗೃತಿಯ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ರಾಜಕೀಯ ಪಕ್ಷಗಳ ಬಳಿ ಹಣವಿತ್ತು ಮತ್ತು ಕಾರ್ಯಕರ್ತರ ದಂಡೇಯಿತ್ತು. ಇಂಥ ದೊಡ್ಡ ಶಕ್ತಿಗಳ ವಿರುದ್ಧ ಬಲಹೀನವಾದ ಸಂಘಟನೆ ಯಾವರೀತಿ ತಾನೆ ಕೆಲಸಮಾಡಬಲ್ಲದು? ಆದರೆ ಕೆಲಸ ಪ್ರಾರಂಭಿಸಿದ ಮೇಲೆ ಮತದಾರರ ವೇದಿಕೆಯ ವಿಚಾರಗಳಿಗೂ ಜನ ಸ್ಪಂದಿಸುತ್ತಾರೆ ಎಂಬ ಅನುಭವ ಬರತೊಡಗಿತು. ರಾಜಕೀಯ ಪಕ್ಷಗಳು ಯಾವ ಬಿರುಸಿನಿಂದ ಕೆಲಸ ಮಾಡುತ್ತವೆಯೋ ಅಷ್ಟೇ ಬಿರುಸಿನಿಂದ ವೇದಿಕೆ ಕೆಲಸಮಾಡಬೇಕಿತ್ತು. ಅದಕ್ಕಾಗಿ ಸಾಧ್ಯವಾದಷ್ಟು ಸಿದ್ಧತೆಯನ್ನು

ಮಾಡಿಕೊಳ್ಳಲಾಯಿತು. ಜಿಲ್ಲೆಯನ್ನೆಲ್ಲಾ ಸುತ್ತುವುದಕ್ಕೆ ಒಂದು ವಾಹನ ಅಗತ್ಯವಾಗಿತ್ತು. ಅದಕ್ಕಾಗಿ ಒಂದು ಕಾರನ್ನು ಬಾಡಿಗೆಗೆ ಗೊತ್ತುಮಾಡಿಕೊಳ್ಳಲಾಯಿತು. ಖಾದಿ ಬಿಳಿ ಬಟ್ಟೆಯ ಮೇಲೆ ಮತದಾರರ ವೇದಿಕೆ ಎಂದು ಬ್ಯಾನರ್ ತಯಾರಿಸಲಾಯಿತು. ವೇದಿಕೆಯ ಬಾವುಟವೆಂದು ಒಂದು ಖಾದಿ ಬಿಳಿ ಬಟ್ಟೆಯ ಮೇಲೆ ಮಧ್ಯದಲ್ಲಿ ಚುನಾವಣಾ ಪೆಟ್ಟಿಗೆಯನ್ನು ಬರೆಯಲಾಯಿತು. ವೇದಿಕೆಯ ವಿಚಾರಗಳನ್ನೂ ಮತ್ತು ಧ್ಯೇಯೋದ್ದೇಶಗಳನ್ನೂ ಹಾಗೂ ಅದರ ಕ್ರಿಯಾಸ್ವರೂಪ ತಿಳಿಸುವ ಹಸ್ತ ಪತ್ರಿಕೆ ಮುದ್ರಿಸಲಾಯಿತು. ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಯಾವ ದಿನಗಳಲ್ಲಿ ಸಂತೆಗಳು ನಡೆಯುತ್ತವೆ ಎಂಬುದನ್ನು ಗುರುತಿಸಿಕೊಂಡು ಆ ಪ್ರಕಾರ ಆ ದಿನಗಳಂದು ಆ ಊರುಗಳಿಗೆ ಹೋಗಿ ವೇದಿಕೆಯ ಪ್ರಚಾರ ಕೆಲಸ ಮಾಡುತ್ತಿದ್ದೆವು. ನಮ್ಮದೇ ಧ್ವನಿವರ್ಧಕ ಹೊಂದಿದ್ದೆವು. ಸಂತೆ ನಡೆಯುತ್ತಿದ್ದ ಸ್ಥಳದಲ್ಲಿ ಯಾವ ಸ್ಥಳ ನಮಗೆ ಸೂಕ್ತವೆಂದು ತೋರುತ್ತಿತ್ತೋ ಆ ಸ್ಥಳದಲ್ಲಿ ನಿಂತು ಭಾಷಣ ಪ್ರಾರಂಭಿಸುತ್ತಿದ್ದೆವು ಮತ್ತು ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದೆವು. ಸುಸಜ್ಜಿತವಾದ ವೇದಿಕೆ ನಿರ್ಮಿಸಲು ಸಾಧ್ಯವಿರಲಿಲ್ಲ ಆದರೂ ಕೂಡ ಜನ ಕುತೂಹಲಿಗಳಾಗಿ ಸೇರುತ್ತಿದ್ದರು. ವೇದಿಕೆಯ ಭಾಷಣಗಳಲ್ಲಿ ರಾಜಕೀಯ ಪಕ್ಷಗಳ ಮತ್ತು ರಾಜಕಾರಣಿಗಳ ದೌರ್ಬಲ್ಯಗಳನ್ನು ಮತ್ತು ಅವರು ಹೇಗೆ ದೇಶದ ಪ್ರಜಾತಂತ್ರ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ ಎಂಬುದನ್ನೆಲ್ಲಾ ವಿವರವಾಗಿ ಹೇಳುತ್ತಿದ್ದುದರಿಂದ ಜನರಿಗೆ ವೇದಿಕೆಯ ಭಾಷಣದಲ್ಲಿ ನಾವಿನ್ಯತೆ ಕಂಡುಬರುತ್ತಿತ್ತು. ಬೇರೆ ರಾಜಕೀಯ ಪಕ್ಷಗಳು ಉಮೇದುವಾರರು ಮತ ಯಾಚಿಸಿದರೆ ಈ ವೇದಿಕೆಯು ಮತದಾರರ ಜಾಗೃತಿಯನ್ನು ಯಾಚಿಸುತ್ತಿತ್ತು. ಈ ಎರಡು ಪ್ರಕಾರದ ಯಾಚನೆಯಲ್ಲಿರುವ ವಿಶೇಷತೆಯನ್ನು ಜನರು ಗಮನಿಸುತ್ತಿದ್ದರು. ವೇದಿಕೆಯ ಭಾಷಣಗಳು ಕೆಲವರ ಮನಸ್ಸಿಗೆ ಒಪ್ಪಿಗೆಯಾಗುತ್ತಿರಲಿಲ್ಲವಾದ್ದರಿಂದ ಅವರು ಕಾರ್ಯಕ್ರಮದ ಮಧ್ಯೆ ಗಲಾಟೆ ಮಾಡುತ್ತಿದ್ದರು. ಅನೇಕ ಪ್ರಕಾರದ ತರ್ಕಹೀನ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅಂತೂ ಸಭೆಯು ವೇದಿಕೆಯ ಸಾಮರ್ಥ್ಯಕ್ಕನುಗುಣವಾಗಿ ಯಶಸ್ವಿಯಾಗಿಯೇ ನಡೆಯುತ್ತಿತ್ತೆಂದು ಹೇಳಬಹುದು. ಹೀಗೆ ಮಂಡ್ಯ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ವೇದಿಕೆಯ ಸಭೆಗಳು ಏರ್ಪಟ್ಟವು. ಮಂಡ್ಯ ನಗರದಲ್ಲಿ ಜನಸಂದಣಿಯಿರುವ ರಸ್ತೆ ಪಕ್ಕದಲ್ಲಿ ನಿಂತು ಸಭೆಯನ್ನು ನಡೆಸಲಾಗುತ್ತಿತ್ತು. ತಾಲ್ಲೂಕು ಸ್ಥಳಗಳಲ್ಲಿ ನಡೆಯುವ ರಾಜಕೀಯ ಪಕ್ಷಗಳ ಸಭೆಗಳ ಮಧ್ಯೆ ವೇದಿಕೆಯೂ ಸಹ ಪೋಲೀಸ್ ಇಲಾಖೆಯಿಂದ ಅನುಮತಿ ಪಡೆದು ನಿರ್ದಿಷ್ಟ ಸಮಯದಲ್ಲಿ ತನ್ನ ಸಭೆ ನಡೆಸುತ್ತಿತ್ತು. ಆದರೆ ಇಲ್ಲಿ ತಮಾಷೆಯ ಮಾತೆಂದರೆ ತಾಲ್ಲೂಕು ಸ್ಥಳದಲ್ಲಿಯ ಆ ಸಭೆಗಳಿಗಾಗಿ ವೇದಿಕೆ ಬೇರೆ ರಾಜಕೀಯ ಪಕ್ಷದ ವೇದಿಕೆಯನ್ನೆ ಮತ್ತು ಅಲ್ಲಿಯ ವ್ಯವಸ್ಥೆಯನ್ನೆ ಉಪಯೋಗಿಸಿಕೊಳ್ಳುತ್ತಿತ್ತು. ವೇದಿಕೆ ಪಕ್ಷಾತೀತವಾಗಿಯಿದೆ ಮತ್ತು ಮತವನ್ನು ಯಾಚಿಸದೆ ಕೇವಲ ಮತದಾರರ ಜಾಗೃತಿ ಮಾಡುತ್ತದೆ ಎಂದು ಪಕ್ಷದ ಸ್ಥಳೀಯ ಸಂಘಟಕರಿಗೆ ಮನವರಿಕೆಯಾದ ಮೇಲೆ ವೇದಿಕೆಗೆ ತನ್ನ ಕಾರ್ಯಕ್ರಮವನ್ನು ನಡೆಸಲು ಅನುಮತಿ ಕೊಡುತ್ತಿದ್ದರು. ಹೀಗೆ

ಪಾಂಡವಪುರ ಟೌನ್ ಮತ್ತು ಚಿನಕುರಳಿ ಟೌನ್‌ನಲ್ಲಿ ವೇದಿಕೆಯ ಕಾರ್ಯಕ್ರಮ ನಡೆದವು. ಸಭೆಯ ನಂತರ ಅನೇಕ ಜನರು ಹಣವನ್ನೂ ಸಹ ಕೊಡುತ್ತಿದ್ದರು. ಆ ಹಣಕ್ಕೆ ರಶೀತಿಯನ್ನು ಕೊಡಲಾಗುತ್ತಿತ್ತು. ಧನ ಸಹಾಯದ ಮೊತ್ತ ಕೇವಲ ಒಂದು ರುಪಾಯಿಯೆಂದು ಇಟ್ಟುಕೊಳ್ಳಲಾಗಿತ್ತು. ಆದ್ದರಿಂದ ಒಂದು ರುಪಾಯಿ ಮೌಲ್ಯದ ರಶೀತಿ ಮುದ್ರಿಸಲಾಗಿತ್ತು. ಒಂದು ರುಪಾಯಿಯನ್ನು ಯಾರಾದರೂ ಕೊಟ್ಟರೆ ತಕ್ಷಣವೇ ರಶೀತಿ ಕೊಡಲಾಗುತ್ತಿತ್ತು. ವೇದಿಕೆಯು ಜಕ್ಕನಹಳ್ಳಿ ಕೂಡು ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಿತ್ತು. ಆ ಸಭೆಗೆ ಎಲ್ಲ ರಾಜಕೀಯ ಪಕ್ಷದ ಮುಖಂಡರನ್ನು ಆಹ್ವಾನಿಸಿ ತಮ್ಮ ತಮ್ಮ ಪಕ್ಷದ ಪ್ರಣಾಳಿಕೆಯ ವಿಷಯವನ್ನು ತಿಳಿಸಲು ಕಾಲಾವಕಾಶ ಕೊಡಲಾಗಿತ್ತು. ಇದರ ಉದ್ದೇಶ ಒಂದೇ ಸಾರ್ವಜನಿಕ ವೇದಿಕೆಯ ಮೂಲಕ ಮತದಾರರಿಗೆ ಎಲ್ಲ ಪಕ್ಷಗಳ ಪ್ರಣಾಳಿಕೆಯು ಪರಿಚಯ ಆಗಬೇಕೆಂಬುದೇ ಆಗಿತ್ತು. ಅಲ್ಲದೆ ಆ ಕ್ಷೇತ್ರದ ಉಮೇದುವಾರರಿಂದ ಸ್ವಂತ ಆಸ್ತಿಯ ವಿವರಗಳನ್ನು ಸಹ ಪಡೆಯಲಾಗಿತ್ತು. ಹೀಗೆ ಸೇರಿದ ಆ ಸಭೆಗೆ ರೈತ ಸಂಘದ ಪುಟ್ಟಣ್ಣಯ್ಯ ಮತ್ತು ಕಾಂಗ್ರೆಸ್ ಪಕ್ಷದ ಲೋಕಸಭಾ ಅಭ್ಯರ್ಥಿ ಜಿ.ಮಾದೇಗೌಡರು, ಬಿಜೆಪಿ ಉಮೇದುವಾರರೂ ಹಾಗೂ ಕೆಲವು ಸ್ವತಂತ್ರ ಅಭ್ಯರ್ಥಿಗಳೂ ಬಂದಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ಜನ ಸೇರಿದ್ದರು. ಈ ಸಭೆಯಲ್ಲಿ ಮತದಾರರ ಉದ್ದೇಶಗಳನ್ನು ಎಲ್ಲರಿಗೂ ತಿಳಿಸಲಾಗಿತ್ತು. ಉಮೇದುವಾರರೂ ಸಹ ಮಾತನಾಡಿದರು. ಒಟ್ಟಾರೆ ಸಭೆಯು ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ನಡೆಯಿತು. ಈ ವೇದಿಕೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಮಂಡ್ಯದ ವಕೀಲರಾದ ವಿಶ್ವನಾಥ್, ದ್ಯಾವಪ್ಪ ಮತ್ತು ಅವರ ಸಂಗಡಿಗರು ಹಾಗು ಲತಾ ಎಂಬ ಯುವತಿ ಸಕ್ರಿಯವಾಗಿ ಭಾಗವಹಿಸಿದ್ದರು. ವೇದಿಕೆ ಸಾಕಷ್ಟು ಬಲಿಷ್ಟಗೊಳ್ಳದೆ ಇದ್ದರೂ ವಿಶ್ವನಾಥ್ ಮತ್ತು ದ್ಯಾವಪ್ಪನವರು ವೇದಿಕೆಯ ಪರವಾಗಿ ಅಭ್ಯರ್ಥಿಗಳನ್ನಾಗಿ ನಿಯೋಜಿಸಲಾಗಿತ್ತು. ಈ ಇಬ್ಬರಿಗೂ ಸಾಕಷ್ಟು ಮತಗಳು ಬಂದರೂ ಕೂಡ ಠೇವಣಿ ಕಳೆದುಕೊಂಡರು. ವೇದಿಕೆ ಬಲಿಷ್ಟಗೊಳ್ಳುವ ಮೊದಲೇ ಚುನಾವಣಾ ಕ್ಷೇತ್ರಕ್ಕೆ ಅದರ ಕಾರ್ಯಕರ್ತರು ಧುಮುಕಿದ್ದು ದೊಡ್ಡ ತಪ್ಪಾಯಿತು. ಇದರ ಪರಿಣಾಮವಾಗಿ ವೇದಿಕೆ ದುರ್ಬಲಗೊಂಡು ನಿಷ್ಕ್ರಿಯವಾಯಿತು. ಆದರೆ ಮಂಡ್ಯದ ರಾಜಕಾರಣದ ಮೇಲೆ ಒಂದು ಪ್ರಮಾಣದಲ್ಲಿ ಪಕ್ಷಾತೀತ ಮತದಾರರ ವೇದಿಕೆ ತನ್ನ ಪ್ರಭಾವ ಬೀರದೆ ಉಳಿಯಲಿಲ್ಲ. ಇಂದಿಗೂ ಅನೇಕ ವರ್ಷಗಳ ನಂತರವೂ ಅನೇಕ ಜನರು ವೇದಿಕೆಯನ್ನು ಸ್ಮರಿಸುತ್ತಾರೆ ಮತ್ತು ಅದರ ಅಗತ್ಯತೆಯನ್ನು ಬಯಸುತ್ತಾರೆ. ವೇದಿಕೆ ತನ್ನ ಮೂಲ ಉದ್ದೇಶಕ್ಕನುಸಾರವಾಗಿ ಕೆಲಸ ಮಾಡುತ್ತಾಬಂದಿದ್ದರೆ ಇಂದು ಜಿಲ್ಲೆಯಷ್ಟೇ ಅಲ್ಲ ರಾಜ್ಯಮಟ್ಟದಲ್ಲಿಯೂ ಪ್ರಜಾಪ್ರಭುತ್ವದ ಶಕ್ತಿಯಾಗಿ ಹೊರಹೊಮ್ಮುತ್ತಿತ್ತು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎನ್.ಎಸ್.ಸುಬ್ಬಣ್ಣ – ಬೆಂಗಳೂರು
ಶ್ರೀ ನರಸಿಂಹ ದಾಬಡೆ – ಧಾರವಾಡ
ಶ್ರೀ ಎ.ಎಮ್.ರಾಮಚಂದ್ರ – ಮೈಸೂರು
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,
ಶ್ರೀ ಕೆ.ಎನ್.ಸಂಪತ್ಕುಮಾರ್ – ಬೆಂಗಳೂರು
ಶ್ರೀ ಶಿವಣ್ಣ – ಪಾಂಡವಪುರ
ಶ್ರೀ ಅನಂತ್
ಶ್ರೀ ಪೂಜಾರ್ – ಬಾದಾಮಿ
ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net